Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

**( EXTRAORDINARY )**
( ವಿಶೇಷ ಸಂಚಿಕೆ )

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | | |
|---|---|---|---|
| सं. १ | नई दिल्ली, गुरुवार, जून ४, २०२० | ज्येष्ठ २२, १९४२ (शका) | खंड ४९ |
| No. 1 | New Delhi, Thursday, June 4, 2020 | Jyeshta 22, 1942 (Saka) | Vol. 49 |
| ನಂ. ೧ | ನವ ದೆಹಲಿ, ಗುರುವಾರ, ಜೂನ್ ೪, ೨೦೨೦ | ಜ್ಯೇಷ್ಠ ೨೨, ೧೯೪೨ (ಶಕ) | ಸಂಪುಟ ೪೯ |


**Ministry of Law and Justice**
Legislative Department
New Delhi, 04th June, 2020

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**ವಿಧಾಯೀ ಇಲಾಖೆ**
**ನವದೆಹಲಿ, 04ನೇ ಜೂನ್ 2020**

The Translation in Kannada of the following Acts, namely:- (1) The Public Debt Act, 1944 (18 of 1944) (2) The Dock Workers (Safety, Health and Welfare) Act, 1986 (54 of 1986) (3) The Building and Other Construction Workers' (Regulation of Employment and Conditions of Service) Act, 1996 (27 of 1996) (4) The Building and Other Construction Worker's Welfare Cess Act, 1996 (28 of 1996) (5) The Petroleum and Natural Gas Regulatory Board Act, 2006 (19 of 2006) (6) The Warehousing (Development and Regulation Act), 2007 (37 of 2007) (7) The Carriage by Road Act, 2007 (41 of 2007) (8) The Collection of Statistics Act, 2008 (7 of 2009) (9) The Protection of Children from Sexual Offences Act, 2012 (32 of 2012) (10) The Prohibition of Employment as Manual Scavengers and their Rehabilitation Act, 2013 - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

# ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ನಿಯೋಜನೆ ಮತ್ತು ಸೇವಾ ಷರತ್ತುಗಳ ವಿನಿಯಮ) ಅಧಿನಿಯಮ, 1996

(1996ರ ಸಂಖ್ಯೆ 27)

[ಆಗಸ್ಟ್ 19, 1996]

ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ನಿಯೋಜನೆಯನ್ನು ಮತ್ತು ಸೇವಾ ಷರತ್ತುಗಳನ್ನು ನಿಯಮಿಸುವ ಮತ್ತು ಅವರ ಸುರಕ್ಷತೆ, ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿ ಕ್ರಮಗಳಿಗೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕವಾದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ನಲವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಕ್ಕದ್ದು:-

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.–** (1) ಈ ಅಧಿನಿಯಮವನ್ನು ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ನಿಯೋಜನೆ ಮತ್ತು ಸೇವಾ ಷರತ್ತುಗಳ ವಿನಿಯಮ) ಅಧಿನಿಯಮ, 1996 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು 1966ರ ಮಾರ್ಚ್ 1 ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(4) ಇದು ಹಿಂದಿನ 12 ತಿಂಗಳುಗಳ ಯಾವುದೇ ದಿನದಂದು ಯಾವುದೇ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ಹತ್ತು ಅಥವಾ ಹೆಚ್ಚು ಕಟ್ಟಡ ಕೆಲಸಗಾರರನ್ನು ಯಾವ ಕಾರ್ಯ ಸಂಸ್ಥೆಯು ನಿಯೋಜಿಸಿಕೊಂಡಿದೆಯೋ ಅಥವಾ ನಿಯೋಜಿಸಿಕೊಂಡಿತ್ತೊ ಆ ಪ್ರತಿಯೊಂದು ಕಾರ್ಯಸಂಸ್ಥೆಗೆ ಅನ್ವಯಿಸತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ, ಕಾರ್ಯಸಂಸ್ಥೆಯಲ್ಲಿ ನಿಯೋಜಿತರಾಗಿರುವ ಕಟ್ಟಡ ಕೆಲಸಗಾರರ ಸಂಖ್ಯೆಯನ್ನು ಲೆಕ್ಕಹಾಕುವಾಗ, ಒಂದು ದಿನದಲ್ಲಿ ನಿಯೋಜಕನಿಂದಾಗಲೀ ಅಥವಾ ಕಂಟ್ರಾಕ್ಟರ್‌ನಿಂದಾಗಲೀ ಬೇರೆ ಬೇರೆ ಸರದಿಗಳಲ್ಲಿ ನಿಯೋಜನೆಗೊಂಡಿದ್ದ ಕಟ್ಟಡ ಕೆಲಸಗಾರರನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

2. **ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಮುಚಿತ ಸರ್ಕಾರ" ಎಂದರೆ,–

(i) ಯಾವ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ (1947ರ 14) ಮೇರೆಗೆ ಸಮುಚಿತ ಸರ್ಕಾರವು ಕೇಂದ್ರ ಸರ್ಕಾರವಾಗಿದೆಯೋ ಆ ಕಾರ್ಯಸಂಸ್ಥೆಯ (ನೇರವಾಗಿಯಾಗಲಿ ಅಥವಾ ಕಂಟ್ರಾಕ್ಟರನ ಮೂಲಕವಾಗಲಿ ಕಟ್ಟಡ ಕೆಲಸಗಾರರನ್ನು ನಿಯೋಜಿಸಿಕೊಳ್ಳುವ) ಸಂಬಂಧದಲ್ಲಿ, ಕೇಂದ್ರ ಸರ್ಕಾರ;

(ii) ಸಾರ್ವಜನಿಕ ವಲಯ ಉದ್ಯಮವಾಗಿರುವ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವ ಕಾರ್ಯಸಂಸ್ಥೆಯು ನೇರವಾಗಿಯಾಗಲೀ ಅಥವಾ ಕಂಟ್ರಾಕ್ಟರನ ಮೂಲಕವಾಗಿಯಾಗಲೀ ಕಟ್ಟಡ ಕೆಲಸಗಾರರನ್ನು ನಿಯೋಜಿಸಿಕೊಳ್ಳುವುದೋ ಅಂಥ ಯಾವುದೇ ಕಾರ್ಯಸಂಸ್ಥೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ;

**ವಿವರಣೆ:–** (ii)ನೇ ಉಪಖಂಡದ ಉದ್ದೇಶಗಳಿಗಾಗಿ, "ಸಾರ್ವಜನಿಕ ವಲಯ ಉದ್ಯಮ" ಎಂದರೆ ಯಾವುದೇ ಕೇಂದ್ರ ಅಧಿನಿಯಮದ, ರಾಜ್ಯ ಅಧಿನಿಯಮದ ಅಥವಾ ಪ್ರಾಂತೀಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಯಾವುದೇ ನಿಗಮ ಅಥವಾ ಕಂಪನಿಗಳ ಅಧಿನಿಯಮ, 1956ರ (1956ರ 1) 617ನೇ ಪ್ರಕರಣದಲ್ಲಿ ಪರಿಭಾಷಿಸಿರುವ, ಯಾವ ಸರ್ಕಾರಿ ಕಂಪನಿಯು ಕೇಂದ್ರ ಸರ್ಕಾರದ ಒಡೆತನದಲ್ಲಿರುವುದೋ, ನಿಯಂತ್ರಣದಲ್ಲಿರುವುದೋ ಅಥವಾ ಆ ನಿರ್ವಹಣೆಯಲ್ಲಿರುವುದೋ ಆ ಸರ್ಕಾರೀ ಕಂಪನಿ;

(iii) ಯಾವ ಕಾರ್ಯಸಂಸ್ಥೆಯು ನೇರವಾಗಿಯಾಗಲಿ ಅಥವಾ ಕಂಟ್ರಾಕ್ಟರನ ಮೂಲಕವಾಗಿಯಾಗಲಿ ಕಟ್ಟಡ ಕೆಲಸಗಾರರನ್ನು ನಿಯೋಜಿಸಿಕೊಳ್ಳುವುದೋ ಆ ಯಾವುದೇ ಇತರ ಕಾರ್ಯಸಂಸ್ಥೆಯ ಸಂಬಂಧದಲ್ಲಿ, ಆ ಇತರ ಕಾರ್ಯಸಂಸ್ಥೆಯು ಯಾವ ರಾಜ್ಯದಲ್ಲಿದೆಯೋ ಆ ರಾಜ್ಯದ ಸರ್ಕಾರ.

(ಬಿ) "ಫಲಾನುಭವಿ" ಎಂದರೆ 12ನೇ ಪ್ರಕರಣದ ಮೇರೆಗೆ ನೋಂದಾಯಿತನಾದ ಕಟ್ಟಡ ಕೆಲಸಗಾರ;

(ಸಿ) "ಮಂಡಳಿ" ಎಂದರೆ 18ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಚಿತವಾದ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕ್ಷೇಮಾಭಿವೃದ್ಧಿ ಮಂಡಳಿ;

(ಡಿ) "ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿ" ಎಂದರೆ ಕಟ್ಟಡಗಳ, ಬೀದಿಗಳ, ರಸ್ತೆಗಳ, ರೈಲ್ವೆಗಳ, ಟ್ರಾಂವೇಗಳ, ವಿಮಾನ ನೆಲೆಗಳ, ನೀರಾವರಿಯ, ಚರಂಡಿಯ, ಒಡ್ಡುಗಳ ಮತ್ತು ನೌಕಾಯಾನ ಕಾಮಗಾರಿಗಳ, ಪ್ರವಾಹ ನಿಯಂತ್ರಣ ಕಾಮಗಾರಿಗಳ (ಮಳೆ ನೀರು ಚರಂಡಿ ಕಾಮಗಾರಿಗಳೂ ಸೇರಿದಂತೆ), ವಿದ್ಯುಚ್ಛಕ್ತಿಯ ಉತ್ಪಾದನೆ, ಪ್ರಸರಣ

ಮತ್ತು ವಿತರಣೆಯ, ಜಲ ಕಾಮಗಾರಿಗಳ (ನೀರು ಹಂಚಿಕೆಗಾಗಿ ಕಾಲುವೆಗಳ ನಿರ್ಮಾಣವೂ ಸೇರಿದಂತೆ), ತೈಲ ಮತ್ತು ಅನಿಲ ಸ್ಥಾಪನೆಗಳ, ವಿದ್ಯುಚ್ಛಕ್ತಿ ಲೈನ್‌ಗಳ, ವೈರ್‌ಲೆಸ್, ರೇಡಿಯೋ, ಟೆಲಿವಿಷನ್, ಟೆಲಿಫೋನ್, ಟೆಲಿಗ್ರಾಫ್ ಮತ್ತು ಸಾಗರೋತ್ತರ ಸಂಪರ್ಕಗಳ, ಅಣೆಕಟ್ಟುಗಳ, ನಾಲೆಗಳ, ಜಲಾಶಯಗಳ, ಜಲ ಮಾರ್ಗಗಳ, ಸುರಂಗಗಳ, ಸೇತುವೆಗಳ, ಕಮಾನು ಸೇತುವೆಗಳ, ಅಡಿಗಾಲುವೆಗಳ, ಪೈಪ್‌ಲೈನು, ಟವರ್‌ಗಳ, ಕೂಲಿಂಗ್ ಟವರ್‌ಗಳ, ಟ್ರಾನ್ಸ್‌ಮಿಷನ್ ಟವರ್‌ಗಳ ಮತ್ತು ಅಧಿಸೂಚನೆಯ ಮೂಲಕ ಸಮುಚಿತ ಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಕಾಮಗಾರಿಗಳ ಅಥವಾ ಅವುಗಳಿಗೆ ಸಂಬಂಧಿಸಿದಂತೆ ನಿರ್ಮಾಣ, ಮಾರ್ಪಾಟು, ದುರಸ್ತಿ ನಿರ್ವಹಣೆ ಅಥವಾ ಅವುಗಳನ್ನು ಕೆಡವಿ ಹಾಕುವುದು. ಆದರೆ, ಕಾರ್ಖಾನೆಗಳ ಅಧಿನಿಯಮ, 1948 (1948ರ 63)ರ ಅಥವಾ ಗಣಿಗಳ ಅಧಿನಿಯಮ, 1952 (1952ರ 35)ರ ಉಪಬಂಧಗಳು ಯಾವ ಕಟ್ಟಡಕ್ಕೆ ಅಥವಾ ನಿರ್ಮಾಣ ಕಾಮಗಾರಿಗೆ ಅನ್ವಯವಾಗುತ್ತವೆಯೋ ಆ ಯಾವುದೇ ಕಟ್ಟಡವು ಅಥವಾ ನಿರ್ಮಾಣ ಕಾಮಗಾರಿಯು ಇದರಲ್ಲಿ ಸೇರುವುದಿಲ್ಲ;

(ಇ) "ಕಟ್ಟಡ ಕೆಲಸಗಾರ" ಎಂದರೆ ಯಾವುದೇ ಕಟ್ಟಡ ಅಥವಾ ಇತರೆ ನಿರ್ಮಾಣ ಕಾಮಗಾರಿಯ ಸಂಬಂಧದಲ್ಲಿ, ನಿಯೋಜನೆಯ ನಿಬಂಧನೆಗಳು ವ್ಯಕ್ತವಾಗಿರಲಿ ಅಥವಾ ಇಂಗಿತವಾಗಿರಲಿ ಯಾವುದೇ ಕುಶಲ, ಅರೆಕುಶಲ, ಅಥವಾ ಅಕುಶಲ, ದೈಹಿಕ, ಮೇಲ್ವಿಚಾರಣೆ, ತಾಂತ್ರಿಕ ಅಥವಾ ಲಿಪಿಕ ಸ್ವರೂಪದ ಕೆಲಸ ಮಾಡುವುದಕ್ಕಾಗಿ ಮಜೂರಿಯ ಅಥವಾ ಕೂಲಿಯ ಸಂದಾಯದ ಮೇಲೆ ನಿಯೋಜನೆಗೊಂಡಿರುವ ವ್ಯಕ್ತಿ, ಆದರೆ,-

(i) ಮುಖ್ಯವಾಗಿ ವ್ಯವಸ್ಥಾಪನಾ ಅಥವಾ ಆಡಳಿತಾತ್ಮಕ ಸಾಮರ್ಥ್ಯದಲ್ಲಿ ನಿಯೋಜನೆಗೊಂಡಿರುವ; ಅಥವಾ

(ii) ಮೇಲ್ವಿಚಾರಣಾ ಸಾಮರ್ಥ್ಯದಲ್ಲಿ ನಿಯೋಜನೆಗೊಂಡಿದ್ದು, ಪ್ರತಿ ತಿಂಗಳಿಗೆ ಒಂದು ಸಾವಿರದ ಆರು ನೂರು ರೂಪಾಯಿಗಳಿಗೆ ಮೀರಿದ ಮಜೂರಿಯನ್ನು ಪಡೆಯುತ್ತಿರುವಂಥ ಅಥವಾ ಕಚೇರಿಗೆ ಸಂಬಂಧಿಸಿದ ಕರ್ತವ್ಯಗಳ ಸ್ವರೂಪದಿಂದಾಗಲೀ ಅಥವಾ ಅವನಲ್ಲಿ ನಿಹಿತವಾಗಿರುವ ಅಧಿಕಾರಗಳ ಕಾರಣದಿಂದಾಗಲೀ ಮುಖ್ಯವಾಗಿ ವ್ಯವಸ್ಥಾಪನಾ ಸ್ವರೂಪದ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವಂಥ

– ಯಾರೇ ವ್ಯಕ್ತಿಯು ಒಳಗೊಳ್ಳುವುದಿಲ್ಲ;

(ಎಫ್) "ಮುಖ್ಯಪರಿವೀಕ್ಷಕ" ಎಂದರೆ 42ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಕಟ್ಟಡ ಮತ್ತು ನಿರ್ಮಾಣ ಪರಿವೀಕ್ಷಣಾ ಮುಖ್ಯ ಪರಿವೀಕ್ಷಕ;

(ಜಿ) "ಕಂಟ್ರಾಕ್ಟರ್" ಎಂದರೆ ಕೇವಲ ತಯಾರಿಕಾ ಸರಕುಗಳನ್ನು ಅಥವಾ ವಸ್ತುಗಳನ್ನು ಸರಬರಾಜು ಮಾಡುವುದನ್ನು ಹೊರತುಪಡಿಸಿ ಕಟ್ಟಡ ಕೆಲಸಗಾರರನ್ನು ನಿಯೋಜಿಸಿಕೊಂಡು ಯಾವುದೇ ಕಾರ್ಯಸಂಸ್ಥೆಗೆ ಗೊತ್ತುಪಡಿಸಿದ ಕಾರ್ಯವನ್ನು ಮಾಡಿಕೊಡುವ ಅಥವಾ ಕಾರ್ಯಸಂಸ್ಥೆಯ ಯಾವುದೇ ಕಾಮಗಾರಿಗಾಗಿ ಕಟ್ಟಡ ಕೆಲಸಗಾರರನ್ನು ಸರಬರಾಜು ಮಾಡುವ ವ್ಯಕ್ತಿ; ಮತ್ತು ಇದರಲ್ಲಿ ಸಬ್-ಕಂಟ್ರಾಕ್ಟರನು ಸೇರುತ್ತಾನೆ;

(ಹೆಚ್) "ಮಹಾ ನಿರ್ದೇಶಕ" ಎಂದರೆ 42ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಪರಿವೀಕ್ಷಣಾ ಮಹಾ ನಿರ್ದೇಶಕ;

(ಐ) ಒಂದು ಕಾರ್ಯಸಂಸ್ಥೆಯ ಸಂಬಂಧದಲ್ಲಿ "ನಿಯೋಜಕ" ಎಂದರೆ ಅದರ ಮಾಲೀಕ, ಮತ್ತು ಇದು,-

(i) ಸರ್ಕಾರದ ಯಾವುದೇ ಇಲಾಖೆಯು ಅಥವಾ ಅದರ ಅಧಿಕಾರದ ಮೇರೆಗೆ ಯಾರೇ ಕಂಟ್ರಾಕ್ಟರನಿಲ್ಲದೆ ನೇರವಾಗಿ ಕಟ್ಟಡ ಅಥವಾ ಇತರ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಸಂಬಂಧದಲ್ಲಿ, ಈ ಬಗ್ಗೆ ನಿರ್ದಿಷ್ಟಪಡಿಸಿದ ಪ್ರಾಧಿಕಾರಿಯನ್ನು, ಅಥವಾ ಪ್ರಾಧಿಕಾರಿಯನ್ನು ನಿರ್ದಿಷ್ಟಪಡಿಸದಿರುವಲ್ಲಿ ಇಲಾಖಾ ಮುಖ್ಯಸ್ಥನನ್ನು;

(ii) ಸ್ಥಳೀಯ ಪ್ರಾಧಿಕಾರವು ಅಥವಾ ಇತರ ಕಾರ್ಯಸಂಸ್ಥೆಯು ಅಥವಾ ಅದರ ಪರವಾಗಿ ಯಾರೇ ಕಂಟ್ರಾಕ್ಟರನಿಲ್ಲದೆ ನೇರವಾಗಿ ಯಾವುದೇ ಕಟ್ಟಡ ಅಥವಾ ಇತರ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಸಂಬಂಧದಲ್ಲಿ ಆ ಪ್ರಾಧಿಕಾರದ ಅಥವಾ ಕಾರ್ಯಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು;

(iii) ಕಂಟ್ರಾಕ್ಟರನು ಅಥವಾ ಅವನ ಮೂಲಕ ಅಥವಾ ಕಂಟ್ರಾಕ್ಟರನು ಒದಗಿಸಿದ ಕಟ್ಟಡದ ಕೆಲಸಗಾರರನ್ನು ನಿಯೋಜಿಸಿಕೊಂಡು ನಿರ್ವಹಿಸಿದ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯ ಸಂಬಂಧದಲ್ಲಿ, ಕಂಟ್ರಾಕ್ಟರನನ್ನು

– ಒಳಗೊಳ್ಳುತ್ತದೆ.

(ಜೆ) "ಕಾರ್ಯಸಂಸ್ಥೆ" ಎಂದರೆ ಯಾವುದೇ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ಕಟ್ಟಡ ಕೆಲಸಗಾರರನ್ನು ನಿಯೋಜಿಸಿಕೊಳ್ಳುವ ಸರ್ಕಾರಕ್ಕೆ, ಯಾವುದೇ ನಿಗಮಿತ ನಿಕಾಯಕ್ಕೆ ಅಥವಾ ಫರ್ಮಿಗೆ, ವ್ಯಕ್ತಿಗೆ ಅಥವಾ ವ್ಯಕ್ತಿಗಳ ಸಂಘಕ್ಕೆ ಅಥವಾ ಇತರ ನಿಕಾಯಕ್ಕೆ ಸೇರಿದ ಅಥವಾ ಅದರ ಅಥವಾ ಅವನ ನಿಯಂತ್ರಣದಲ್ಲಿರುವ ಯಾವುದೇ ಕಾರ್ಯಸಂಸ್ಥೆ; ಮತ್ತು ಕಂಟ್ರಾಕ್ಟರನಿಗೆ ಸೇರಿದ ಕಾರ್ಯಸಂಸ್ಥೆಯು ಒಳಗೊಳ್ಳುತ್ತದೆ, ಆದರೆ ಯಾರು ತನ್ನ ಸ್ವಂತ ನಿವಾಸದ ಸಂಬಂಧದಲ್ಲಿ ಯಾವುದೇ ಕಟ್ಟಡ ಅಥವಾ ನಿರ್ಮಾಣ ಕಾರ್ಯಕ್ಕಾಗಿ ಅಂಥ ಕೆಲಸಗಾರರನ್ನು ನಿಯೋಜಿಸಿಕೊಳ್ಳುವನೋ ಆ ವ್ಯಕ್ತಿಯು, ಅಂಥ ನಿರ್ಮಾಣ ವೆಚ್ಚವು ಹತ್ತು ಲಕ್ಷ ರೂ.ಗಳಿಗಿಂತ ಹೆಚ್ಚಿಗೆ ಇರದಿದ್ದರೆ, ಒಳಗೊಳ್ಳುವುದಿಲ್ಲ.

(ಕೆ) "ನಿಧಿ" ಎಂದರೆ 24ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿಸಿದ ಮಂಡಲಿಯ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕ್ಷೇಮಾಭಿವೃದ್ಧಿ ನಿಧಿ;

(ಎಲ್) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಎಂ) "ನಿಯಮಿಸಿದ" ಎಂದರೆ ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎನ್) "ಮಜೂರಿಗಳು" ಎಂಬ ಪದವು ಮಜೂರಿ ಸಂದಾಯ ಅಧಿನಿಯಮ, 1936 (1936ರ 4)ರ 2ನೇ ಪ್ರಕರಣದ (vi)ನೇ ಖಂಡದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಇಲ್ಲಿಯೂ ಹೊಂದಿರತಕ್ಕದ್ದು.

(2) ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರದ ಯಾವುದೇ ಕಾನೂನಿಗೆ, ಆ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಅದಕ್ಕೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

## ಅಧ್ಯಾಯ – II

## ಸಲಹಾ ಸಮಿತಿಗಳು ಮತ್ತು ತಜ್ಞ ಸಮಿತಿಗಳು

3. **ಕೇಂದ್ರ ಸಲಹಾ ಸಮಿತಿ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಜಾರಿಯಿಂದಾಗಿ ಉದ್ಭವಿಸುವ, ಅದಕ್ಕೆ ಒಪ್ಪಿಸಬಹುದಾದಂಥ ವಿಷಯಗಳ ಮೇಲೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದಕ್ಕಾಗಿ ಕೇಂದ್ರ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಸಲಹಾ ಸಮಿತಿ (ಇದರಲ್ಲಿ ಇನ್ನು ಮುಂದೆ ಕೇಂದ್ರ ಸಲಹಾ ಸಮಿತಿ ಎಂದು ಉಲ್ಲೇಖಿಸಲಾಗಿದೆ) ಎಂದು ಕರೆಯಲಾಗುವ ಒಂದು ಸಮಿತಿಯನ್ನು ಸಾಧ್ಯವಾದಷ್ಟು ಬೇಗನೆ ರಚಿಸತಕ್ಕದ್ದು.

(2) ಕೇಂದ್ರ ಸಲಹಾ ಸಮಿತಿಯು ,–

(ಎ) ಕೇಂದ್ರ ಸರ್ಕಾರವು ನೇಮಕ ಮಾಡುವ ಅಧ್ಯಕ್ಷ;

(ಬಿ) ಸಂಸತ್ತಿನ ಮೂರು ಸದಸ್ಯರು, ಅವರಲ್ಲಿ ಇಬ್ಬರನ್ನು ಲೋಕಸಭೆಯಿಂದ ಮತ್ತೊಬ್ಬರನ್ನು ರಾಜ್ಯ ಸಭೆಯಿಂದ ಚುನಾಯಿಸತಕ್ಕದ್ದು – ಸದಸ್ಯರು

(ಸಿ) ಮಹಾ ನಿರ್ದೇಶಕ – ಪದನಿಮಿತ್ತ ಸದಸ್ಯ

(ಡಿ) ನಿಯೋಜಕರನ್ನು, ಕಟ್ಟಡ ಕೆಲಸಗಾರರನ್ನು, ವಾಸ್ತುಶಿಲ್ಪಿಗಳ ಸಂಘಗಳನ್ನು, ಇಂಜಿನಿಯರುಗಳನ್ನು, ಅಪಘಾತ ವಿಮಾ ಸಂಸ್ಥೆಗಳನ್ನು ಪ್ರತಿನಿಧಿಸುವುದಕ್ಕೆ ಮತ್ತು ಕೇಂದ್ರ ಸಲಹಾ ಸಮಿತಿಯಲ್ಲಿ ಯಾವ ಹಿತಾಸಕ್ತಿಗಳಿಗೆ ಪ್ರಾತಿನಿಧ್ಯ ಇರಬೇಕೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವುದೋ ಆ ಯಾವುದೇ ಇತರ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಕ್ಕೆ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ಹದಿಮೂರನ್ನು ಮೀರದಷ್ಟು ಆದರೆ, ಒಂಭತ್ತಕ್ಕಿಂತ ಕಡಿಮೆ ಇಲ್ಲದಷ್ಟು ಸಂಖ್ಯೆಯ ಇತರ ಸದಸ್ಯರು

– ಇವರನ್ನು ಒಳಗೊಂಡಿರತಕ್ಕದ್ದು.

(3) ಉಪ-ಪ್ರಕರಣ (2)ರ (ಡಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಪ್ರವರ್ಗಗಳಲ್ಲಿ ಪ್ರತಿಯೊಂದು ಪ್ರವರ್ಗದಿಂದ ಸದಸ್ಯರನ್ನಾಗಿ ನೇಮಕ ಮಾಡಬೇಕಾದ ವ್ಯಕ್ತಿಗಳ ಸಂಖ್ಯೆ, ಕೇಂದ್ರ ಸಲಹಾ ಸಮಿತಿಯ ಸದಸ್ಯರ ಪದಾವಧಿ ಮತ್ತು ಸೇವೆಯ ಇತರ ಷರತ್ತುಗಳು, ಅವರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಅವರಲ್ಲಿ ಉಂಟಾದ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿಯು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಕಟ್ಟಡ ಕೆಲಸಗಾರರನ್ನು ಪ್ರತಿನಿಧಿಸಲು ನಾಮನಿರ್ದೇಶನಗೊಂಡ ಸದಸ್ಯರ ಸಂಖ್ಯೆಯು ನಿಯೋಜಕರನ್ನು ಪ್ರತಿನಿಧಿಸಲು ನಾಮನಿರ್ದೇಶನಗೊಂಡ ಸದಸ್ಯರ ಸಂಖ್ಯೆಗಿಂತ ಕಡಿಮೆ ಇರತಕ್ಕದ್ದಲ್ಲ.

(4) ಕೇಂದ್ರ ಸಲಹಾ ಸಮಿತಿಯು ಸದಸ್ಯನ ಪದವನ್ನು ಧಾರಣ ಮಾಡಿರುವ ವ್ಯಕ್ತಿಯು ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗಿರುವ ಅಥವಾ ಸದಸ್ಯನಾಗಿರುವ ಕಾರಣದಿಂದಾಗಿ ಅವನನ್ನು ಅನರ್ಹನನ್ನಾಗಿಸತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

4. **ರಾಜ್ಯ ಸಲಹಾ ಸಮಿತಿ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಜಾರಿಯಿಂದಾಗಿ ಉದ್ಭವಿಸುವ, ಅದಕ್ಕೆ ಒಪ್ಪಿಸಬಹುದಾದಂಥ ವಿಷಯಗಳ ಮೇಲೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದಕ್ಕಾಗಿ ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಸಲಹಾ ಸಮಿತಿ (ಇದರಲ್ಲಿ ಇನ್ನು ಮುಂದೆ ರಾಜ್ಯ ಸಲಹಾ ಸಮಿತಿ ಎಂದು ಉಲ್ಲೇಖಿಸಲಾಗಿದೆ) ಎಂದು ಕರೆಯಲಾಗುವ ಒಂದು ಸಮಿತಿಯನ್ನು ರಚಿಸತಕ್ಕದ್ದು.

(2) ರಾಜ್ಯ ಸಲಹಾ ಸಮಿತಿಯು,–

(ಎ) ರಾಜ್ಯ ಸರ್ಕಾರವು ನೇಮಕ ಮಾಡುವ ಅಧ್ಯಕ್ಷ;

(ಬಿ) ರಾಜ್ಯ ವಿಧಾನಮಂಡಲದಿಂದ ಚುನಾಯಿತರಾಗುವ ರಾಜ್ಯ ವಿಧಾನಮಂಡಲದ ಇಬ್ಬರು ಸದಸ್ಯರು – ಸದಸ್ಯರು

(ಸಿ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ಒಬ್ಬ ಸದಸ್ಯ;

(ಡಿ) ಮುಖ್ಯ ಪರಿವೀಕ್ಷಕ – ಪದನಿಮಿತ್ತ ಸದಸ್ಯ;

(ಇ) ನಿಯೋಜಕರನ್ನು ಕಟ್ಟಡ ಕೆಲಸಗಾರರನ್ನು, ವಾಸ್ತುಶಿಲ್ಪಿಗಳ ಸಂಘಗಳನ್ನು, ಇಂಜಿನಿಯರುಗಳನ್ನು, ಅಪಘಾತ ವಿಮಾ ಸಂಸ್ಥೆಗಳನ್ನು ಪ್ರತಿನಿಧಿಸುವುದಕ್ಕೆ ಮತ್ತು ರಾಜ್ಯ ಸಲಹಾ ಸಮಿತಿಯಲ್ಲಿ ಯಾವ ಹಿತಾಸಕ್ತಿಗಳಿಗೆ ಪ್ರಾತಿನಿಧ್ಯ ಇರಬೇಕೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವುದೋ ಆ ಯಾವುದೇ ಇತರ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಕ್ಕೆ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವ ಹನ್ನೊಂದನ್ನು ಮೀರದಷ್ಟು ಆದರೆ, ಏಳಕ್ಕಿಂತ ಕಡಿಮೆ ಇಲ್ಲದಷ್ಟು ಸಂಖ್ಯೆಯ ಇತರ ಸದಸ್ಯರು

– ಇವರನ್ನು ಒಳಗೊಂಡಿರತಕ್ಕದ್ದು.

(3) ಉಪ-ಪ್ರಕರಣ (2)ರ (ಇ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಪ್ರವರ್ಗಗಳಲ್ಲಿ ಪ್ರತಿಯೊಂದು ಪ್ರವರ್ಗದಿಂದ ಸದಸ್ಯರನ್ನಾಗಿ ನೇಮಕ ಮಾಡಬೇಕಾದ ವ್ಯಕ್ತಿಗಳ ಸಂಖ್ಯೆ, ರಾಜ್ಯ ಸಲಹಾ ಸಮಿತಿಯ ಸದಸ್ಯರ ಪದಾವಧಿ ಮತ್ತು ಸೇವೆಯ ಇತರ ಷರತ್ತುಗಳು, ಅವರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಅದರಲ್ಲಿ ಉಂಟಾಗುವ ಖಾಲಿಸ್ಥಾನಗಳನ್ನು ಭರ್ತಿ ಮಾಡುವ ರೀತಿ ಇವು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಕಟ್ಟಡ ಕೆಲಸಗಾರರನ್ನು ಪ್ರತಿನಿಧಿಸಲು ನಾಮನಿರ್ದೇಶನಗೊಂಡ ಸದಸ್ಯರ ಸಂಖ್ಯೆಯು ನಿಯೋಜಕರನ್ನು ಪ್ರತಿನಿಧಿಸಲು ನಾಮನಿರ್ದೇಶನಗೊಂಡ ಸದಸ್ಯರ ಸಂಖ್ಯೆಗಿಂತ ಕಡಿಮೆ ಇರತಕ್ಕದ್ದಲ್ಲ.

**5. ತಜ್ಞ ಸಮಿತಿಗಳು.–** (1) ಸಮುಚಿತ ಸರ್ಕಾರವು, ಈ ಅಧಿನಿಯಮದ ಮೇರೆಗೆ ನಿಯಮಗಳನ್ನು ರಚಿಸುವುದಕ್ಕಾಗಿ ಆ ಸರ್ಕಾರಕ್ಕೆ ಸಲಹೆ ನೀಡಲು, ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ವಿಶೇಷ ಅರ್ಹತೆ ಪಡೆದ ವ್ಯಕ್ತಿಗಳನ್ನು ಒಳಗೊಂಡ ಒಂದು ಅಥವಾ ಹೆಚ್ಚು ತಜ್ಞ ಸಮಿತಿಗಳನ್ನು ರಚಿಸಬಹುದು.

(2) ತಜ್ಞ ಸಮಿತಿಯ ಸದಸ್ಯರುಗಳಿಗೆ ಸಮಿತಿಯ ಸಭೆಗಳಿಗೆ ಹಾಜರಾಗಿದ್ದಕ್ಕಾಗಿ ನಿಯಮಿಸಬಹುದಾದಂಥ ಫೀಜನ್ನು ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು:

ಪರಂತು, ಸರ್ಕಾರದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಸ್ಥಾಪಿತವಾದ ಯಾವುದೇ ನಿಗಮಿತ ನಿಕಾಯದ ಅಧಿಕಾರಿಯಾಗಿರುವ ಸದಸ್ಯನಿಗೆ ಯಾವುದೇ ಫೀಜನ್ನು ಅಥವಾ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದಲ್ಲ.

## ಅಧ್ಯಾಯ – III

## ಕಾರ್ಯಸಂಸ್ಥೆಗಳ ನೋಂದಣಿ

**6. ನೋಂದಣಿ ಅಧಿಕಾರಿಗಳ ನೇಮಕ.–** ಸಮುಚಿತ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಿದ ಆದೇಶದ ಮೂಲಕ,–

(ಎ) ಸರ್ಕಾರದ ಗೆಜೆಟೆಡ್ ಅಧಿಕಾರಿಗಳಾಗಿರುವ, ಸೂಕ್ತವೆಂದು ತಾನು ಭಾವಿಸುವಂಥ ವ್ಯಕ್ತಿಗಳನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ನೋಂದಣಿ ಅಧಿಕಾರಿಗಳಾಗಿ ನೇಮಕ ಮಾಡಬಹುದು; ಮತ್ತು

(ಬಿ) ಅಂಥ ನೋಂದಣಿ ಅಧಿಕಾರಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ತಮಗೆ ಪ್ರದತ್ತವಾದ ಅಧಿಕಾರಗಳನ್ನು ಯಾವ ಪ್ರದೇಶ ವ್ಯಾಪ್ತಿಯೊಳಗೆ ಚಲಾಯಿಸತಕ್ಕದ್ದೋ ಆ ಪ್ರದೇಶ ವ್ಯಾಪ್ತಿಯನ್ನು ನಿರ್ಧರಿಸಬಹುದು.

**7. ಕಾರ್ಯಸಂಸ್ಥೆಗಳ ನೋಂದಣಿ.–** (1) ಪ್ರತಿಯೊಬ್ಬ ನಿಯೋಜಕನು,–

(ಎ) ಈ ಅಧಿನಿಯಮವು ಪ್ರಾರಂಭವಾದ ಮೇಲೆ, ಅದು ಯಾವ ಕಾರ್ಯಸಂಸ್ಥೆಗೆ ಅನ್ವಯವಾಗುತ್ತದೋ ಆ ಕಾರ್ಯಸಂಸ್ಥೆಯ ಸಂಬಂಧದಲ್ಲಿ ಅಂಥ ಪ್ರಾರಂಭದ ದಿನದಿಂದ ಅರವತ್ತು ದಿನಗಳ ಅವಧಿಯೊಳಗಾಗಿ; ಮತ್ತು

(ಬಿ) ಈ ಅಧಿನಿಯಮವು ಪ್ರಾರಂಭವಾದ ನಂತರ ಯಾವುದೇ ಕಾಲದಲ್ಲಿ ಯಾವ ಕಾರ್ಯಸಂಸ್ಥೆಗೆ ಅದನ್ನು ಅನ್ವಯಿಸಬಹುದೋ ಆ ಯಾವುದೇ ಇತರ ಕಾರ್ಯಸಂಸ್ಥೆಯ ಸಂಬಂಧದಲ್ಲಿ ಈ ಅಧಿನಿಯಮವು ಅಂಥ ಕಾರ್ಯಸಂಸ್ಥೆಗೆ ಅನ್ವಯವಾಗುವ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ

– ಅಂಥ ಕಾರ್ಯಸಂಸ್ಥೆಯ ನೋಂದಣಿಗಾಗಿ ನೋಂದಣಿ ಅಧಿಕಾರಿಗೆ ಅರ್ಜಿ ಸಲ್ಲಿಸತಕ್ಕದ್ದು:

ಪರಂತು, ಅಂಥ ಅವಧಿಯೊಳಗಾಗಿ ಅರ್ಜಿಯನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದ ಅರ್ಜಿದಾರನಿಗೆ ಸಾಧ್ಯವಾಗಲಿಲ್ಲವೆಂದು ನೋಂದಣಿ ಅಧಿಕಾರಿಗೆ ಮನದಟ್ಟಾದರೆ, ಮೇಲೆ ಹೇಳಿದ ಅವಧಿಯು ಮುಕ್ತಾಯವಾದ ನಂತರವೂ ಅಂಥ ಅರ್ಜಿಯನ್ನು ಅವನು ಅಂಗೀಕರಿಸಬಹುದು.

(2) ಉಪ-ಪ್ರಕರಣ (1)ರ ಮೇರೆಗೆ ಸಲ್ಲಿಸುವ ಪ್ರತಿಯೊಂದು ಅರ್ಜಿಯೂ ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಅಂಥ ಫೀಜು ಆ ಅರ್ಜಿಯೊಂದಿಗೆ ಇರತಕ್ಕದ್ದು.

(3) ಉಪ-ಪ್ರಕರಣ (1)ರ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ನಂತರ, ನೋಂದಣಿ ಅಧಿಕಾರಿಯು ಕಾರ್ಯಸಂಸ್ಥೆಯನ್ನು ನೋಂದಾಯಿಸತಕ್ಕದ್ದು ಮತ್ತು ನೋಂದಣಿ ಪ್ರಮಾಣಪತ್ರವನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದೊಳಗಾಗಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಅದರ ನಿಯೋಜಕನಿಗೆ ನೀಡತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಕಾರ್ಯಸಂಸ್ಥೆಯನ್ನು ನೋಂದಣಿ ಮಾಡಿದ ನಂತರ, ಅಂಥ ಕಾರ್ಯಸಂಸ್ಥೆಯ ಸಂಬಂಧದಲ್ಲಿ ಮಾಲೀಕತ್ವದಲ್ಲಿ ಅಥವಾ ಆಡಳಿತವರ್ಗದಲ್ಲಿ ಅಥವಾ ಇತರ ನಿಯಮಿಸಿದ ವಿವರಗಳಲ್ಲಿ ಯಾವುದೇ ಬದಲಾವಣೆ

ಉಂಟಾದಲ್ಲಿ, ಅಂಥ ಬದಲಾವಣೆಗೆ ಸಂಬಂಧಿಸಿದ ವಿವರಗಳನ್ನು ನಿಯೋಜಕನು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ಬದಲಾವಣೆಯಾದ ಮೂವತ್ತು ದಿನಗಳೊಳಗಾಗಿ ನೋಂದಣಿ ಅಧಿಕಾರಿಗೆ ತಿಳಿಸತಕ್ಕದ್ದು.

**8. ಕೆಲವು ಸಂದರ್ಭಗಳಲ್ಲಿ ನೋಂದಣಿಯ ರದ್ದಿಯಾತಿ.–** ಯಾವುದೇ ತಪ್ಪು ನಿರೂಪಣೆಯಿಂದ ಅಥವಾ ಯಾವುದೇ ಮುಖ್ಯ ಸಂಗತಿಯನ್ನು ಮುಚ್ಚಿಟ್ಟು ಯಾವುದೇ ಕಾರ್ಯಸಂಸ್ಥೆಯನ್ನು ನೋಂದಣಿ ಮಾಡಿಸಲಾಗಿದೆ ಎಂದು ಅಥವಾ ಅಂಥ ಕಾರ್ಯಸಂಸ್ಥೆಯು ನಿರ್ವಹಿಸುತ್ತಿರುವ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸುತ್ತಿಲ್ಲವೆಂದು ಅಥವಾ ಯಾವುದೇ ಇತರ ಕಾರಣದಿಂದಾಗಿ ನೋಂದಣಿಯು ನಿರುಪಯುಕ್ತವಾಗಿದೆಯೆಂದು ಅಥವಾ ಪರಿಣಾಮ ಕಳೆದುಕೊಂಡಿದೆ ಎಂದು ಮತ್ತು ಅದರಿಂದಾಗಿ ನೋಂದಣಿಯನ್ನು ರದ್ದುಪಡಿಸಬೇಕಾದ ಅಗತ್ಯವಿದೆ ಎಂದು ಈ ಬಗ್ಗೆ ತನಗೆ ಮಾಡಿದ ಉಲ್ಲೇಖದ ಮೇಲಾಗಲಿ ಅಥವಾ ಅನ್ಯಥಾ ಆಗಲಿ ನೋಂದಣಿ ಅಧಿಕಾರಿಗೆ ಮನವರಿಕೆಯಾದರೆ ಅವನು ಕಾರ್ಯಸಂಸ್ಥೆಯ ನಿಯೋಜಕನಿಗೆ ಅಹವಾಲನ್ನು ಹೇಳಲು ಅವಕಾಶ ನೀಡಿದ ತರುವಾಯ ನೋಂದಣಿಯನ್ನು ರದ್ದುಪಡಿಸಬಹುದು.

**9. ಅಪೀಲು.–** (1) 8ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಸಮುಚಿತ ಸರ್ಕಾರದಿಂದ ಈ ಬಗ್ಗೆ ನಾಮನಿರ್ದೇಶನಗೊಂಡಿರತಕ್ಕ ಅಪೀಲು ಅಧಿಕಾರಿಗೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದಾಗಿ ಅರ್ಜಿದಾರನಿಗೆ ಸಾಧ್ಯವಾಗಲಿಲ್ಲವೆಂದು ಅಪೀಲು ಅಧಿಕಾರಿಗೆ ಮನದಟ್ಟಾದರೆ ಅವನು ಸದರಿ ಮೂವತ್ತು ದಿವಸಗಳ ಅವಧಿಯು ಮುಕ್ತಯವಾದ ನಂತರವೂ ಅಪೀಲನ್ನು ಅಂಗೀಕರಿಸಬಹುದು.

(2) ಉಪ–ಪ್ರಕರಣ (1)ರ ಮೇರೆಗೆ ಅಪೀಲನ್ನು ಸ್ವೀಕರಿಸಿದ ಮೇಲೆ, ಅಪೀಲು ಅಧಿಕಾರಿಯು, ಅಪೀಲುದಾರನಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ, ಸಾಧ್ಯವಾದಷ್ಟು ಬೇಗನೆ ರದ್ದಿಯಾತಿಯ ಆದೇಶವನ್ನು ಸ್ಥಿರೀಕರಿಸತಕ್ಕದ್ದು, ಮಾರ್ಪಡಿಸತಕ್ಕದ್ದು ಅಥವಾ ರದ್ದು ಮಾಡತಕ್ಕದ್ದು.

**10. ನೋಂದಣಿಯಾಗದಿರುವುದರ ಪರಿಣಾಮ.–** ಈ ಅಧಿನಿಯಮವು ಯಾವ ಕಾರ್ಯಸಂಸ್ಥೆಗೆ ಅನ್ವಯವಾಗುವುದೊ ಆ ಕಾರ್ಯಸಂಸ್ಥೆಯ ನಿಯೋಜಕನು,–

(ಎ) 7ನೇ ಪ್ರಕರಣದ ಮೇರೆಗೆ ನೋಂದಾಯಿಸುವುದು ಅಗತ್ಯವಾಗಿರುವ ಆದರೆ ಆ ಪ್ರಕರಣದ ಮೇರೆಗೆ ನೋಂದಾಯಿಸಿಲ್ಲದ ಕಾರ್ಯಸಂಸ್ಥೆಯ ಸಂದರ್ಭದಲ್ಲಿ;

(ಬಿ) ಯಾವ ಕಾರ್ಯಸಂಸ್ಥೆಯ ಸಂಬಂಧದಲ್ಲಿ, 8ನೇ ಪ್ರಕರಣದ ಮೇರೆಗೆ ನೋಂದಣಿಯನ್ನು ರದ್ದುಪಡಿಸಲಾಗಿದೆಯೋ ಮತ್ತು ರದ್ದುಪಡಿಸುವ ಅಂಥ ಆದೇಶದ ವಿರುದ್ಧ 9ನೇ ಪ್ರಕರಣದ ಮೇರೆಗೆ ಅಪೀಲನ್ನು, ಅಂಥ ಅಪೀಲನ್ನು ಸಲ್ಲಿಸಲು ನಿಯಮಿಸಿದ ಅವಧಿಯೊಳಗಾಗಿ ಸಲ್ಲಿಸಿಲ್ಲವೋ ಅಥವಾ ಹಾಗೆ ಅಪೀಲನ್ನು ಸಲ್ಲಿಸಿದ್ದು ಅಂಥ ಅಪೀಲನ್ನು ವಜಾ ಮಾಡಲಾಗಿದೆಯೋ ಆ ಕಾರ್ಯಸಂಸ್ಥೆಯ ಸಂದರ್ಭದಲ್ಲಿ

– ಸಂದರ್ಭಾನುಸಾರ 7ನೇ ಪ್ರಕರಣದ (1)ನೇ ಉಪ–ಪ್ರಕರಣದ (ಎ) ಖಂಡದಲ್ಲಿ ಅಥವಾ (ಬಿ) ಖಂಡದಲ್ಲಿ ತಿಳಿಸಿರುವ ಅವಧಿಯು ಮುಕ್ತಾಯವಾದ ನಂತರ, ಅಥವಾ 8ನೇ ಪ್ರಕರಣದ ಮೇರೆಗೆ ನೋಂದಣಿಯನ್ನು ರದ್ದುಪಡಿಸಿದ ನಂತರ ಅಥವಾ 9ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಬೇಕಾಗಿದ್ದ ಅವಧಿಯು ಮುಕ್ತಾಯವಾದ ನಂತರ ಅಥವಾ ಅಪೀಲನ್ನು ವಜಾಗೊಳಿಸಿದ ನಂತರ ಕಾರ್ಯಸಂಸ್ಥೆಯಲ್ಲಿ ಯಾರೇ ಕಟ್ಟಡ ಕೆಲಸಗಾರರನ್ನು ನಿಯೋಜಿಸಿಕೊಳ್ಳತಕ್ಕದ್ದಲ್ಲ.

## ಅಧ್ಯಾಯ – IV

### ಫಲಾನುಭವಿಗಳಾಗಿ ಕಟ್ಟಡ ಕೆಲಸಗಾರರ ನೋಂದಣಿ

**11. ನಿಧಿಯ ಫಲಾನುಭವಿಗಳು.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಫಲಾನುಭವಿಯಾಗಿ ನೋಂದಾಯಿತನಾದ ಪ್ರತಿಯೊಬ್ಬ ಕಟ್ಟಡ ಕೆಲಸಗಾರನು ಈ ಅಧಿನಿಯಮದ ಮೇರೆಗೆ ಮಂಡಳಿಯು ಅದರ ನಿಧಿಯಿಂದ ಒದಗಿಸುವ ಪ್ರಯೋಜನಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

**12. ಫಲಾನುಭವಿಗಳಿಗಾಗಿ ಕಟ್ಟಡ ಕೆಲಸಗಾರರ ನೋಂದಣಿ.–** (1) ಹದಿನೆಂಟು ವರ್ಷ ವಯಸ್ಸು ತುಂಬಿರುವ ಆದರೆ ಅರವತ್ತು ವರ್ಷಗಳ ವಯಸ್ಸನ್ನು ತುಂಬಿರದ ಮತ್ತು ಹಿಂದಿನ ಹನ್ನೆರಡು ತಿಂಗಳ ಅವಧಿಯಲ್ಲಿ ತೊಂಭತ್ತು ದಿನಗಳಿಗಿಂತ ಕಡಿಮೆ ಇಲ್ಲದಂತೆ ಯಾವುದೇ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ನಿರತನಾಗಿದ್ದ ಪ್ರತಿಯೊಬ್ಬ ಕಟ್ಟಡ ಕೆಲಸಗಾರನು ಈ ಅಧಿನಿಯಮದ ಮೇರೆಗೆ ಫಲಾನುಭವಿಯಾಗಿ ನೋಂದಾಯಿಸಿಕೊಳ್ಳಲು ಅರ್ಹನಾಗಿರತಕ್ಕದ್ದು.

(2) ನೋಂದಣಿಗಾಗಿ ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಈ ಬಗ್ಗೆ ಮಂಡಲಿಯು ಅಧಿಕೃತಗೊಳಿಸಿದ ಅಧಿಕಾರಿಗೆ ಸಲ್ಲಿಸತಕ್ಕದ್ದು.

(3) ಉಪ–ಪ್ರಕರಣ (2)ರ ಮೇರೆಗೆ ಸಲ್ಲಿಸುವ ಪ್ರತಿಯೊಂದು ಅರ್ಜಿಯೊಂದಿಗೆ ನಿಯಮಿಸಬಹುದಾದಂಥ ದಸ್ತಾವೇಜುಗಳನ್ನು ಮತ್ತು ಐವತ್ತು ರೂಪಾಯಿಗೆ ಮೀರದ ಫೀಜನ್ನು ಇರಿಸತಕ್ಕದ್ದು.

(4) ಉಪ–ಪ್ರಕರಣ (4)ರ ಮೇರೆಗೆ ಮಂಡಲಿಯು ಅಧಿಕೃತಗೊಳಿಸಿದ ಅಧಿಕಾರಿಗೆ, ಅರ್ಜಿದಾರನು ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲಿಸಿದ್ದಾನೆಂದು ಮನದಟ್ಟಾದರೆ ಈ ಅಧಿನಿಯಮದ ಮೇರೆಗೆ ಫಲಾನುಭವಿಯಾಗಿ ಅಂಥ ಕಟ್ಟಡ ಕೆಲಸಗಾರನ ಹೆಸರನ್ನು ಅವನು ನೋಂದಣಿ ಮಾಡತಕ್ಕದ್ದು:

ಪರಂತು, ನೋಂದಣಿಗಾಗಿ ಸಲ್ಲಿಸಿದ ಅರ್ಜಿಯನ್ನು, ಅರ್ಜಿದಾರನಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಡದೆ ತಿರಸ್ಕರಿಸತಕ್ಕದ್ದಲ್ಲ.

(5) ಉಪ-ಪ್ರಕರಣ (4)ರ ಮೇರೆಗಿನ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ತೀರ್ಮಾನದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಮಂಡಲಿಯ ಕಾರ್ಯದರ್ಶಿಗೆ ಅಥವಾ ಈ ಬಗ್ಗೆ ಮಂಡಲಿಯು ನಿರ್ದಿಷ್ಟಪಡಿಸಿದ ಯಾರೇ ಇತರ ಅಧಿಕಾರಿಗೆ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಮೇಲೆ ಕಾರ್ಯದರ್ಶಿಯು ಅಥವಾ ಅಂಥ ಇತರ ಅಧಿಕಾರಿಯು ನೀಡಿದ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಪರಂತು, ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದಾಗಿ ಕಟ್ಟಡ ಕೆಲಸಗಾರನಿಗೆ ಸಾಧ್ಯವಾಗಲಿಲ್ಲವೆಂದು ಕಾರ್ಯದರ್ಶಿಗೆ ಅಥವಾ ಈ ಬಗ್ಗೆ ಮಂಡಲಿಯು ನಿರ್ದಿಷ್ಟಪಡಿಸಿದ ಯಾರೇ ಇತರ ಅಧಿಕಾರಿಗೆ ಮನದಟ್ಟಾದರೆ ಅವನು ಸದರಿ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ನಂತರವೂ ಅಪೀಲನ್ನು ಅಂಗೀಕರಿಸಬಹುದು.

(6) ಮಂಡಳಿಯ ಕಾರ್ಯದರ್ಶಿಯು, ನಿಯಮಿಸಬಹುದಾದಂಥ ರಿಜಿಸ್ಟರುಗಳನ್ನು ಇರಿಸತಕ್ಕದ್ದು.

13. **ಗುರುತಿನ ಚೀಟಿಗಳು.**- (1) ಮಂಡಳಿಯು ಪ್ರತಿಯೊಬ್ಬ ಫಲಾನುಭವಿಗೆ ಒಂದು ಗುರುತಿನ ಚೀಟಿಯನ್ನು ನೀಡತಕ್ಕದ್ದು ಮತ್ತು ಅದರ ಮೇಲೆ ಅವನ ಭಾವಚಿತ್ರವನ್ನು ಕ್ರಮಬದ್ಧವಾಗಿ ಅಂಟಿಸಿರತಕ್ಕದ್ದು ಮತ್ತು ಅವನು ನಿರ್ವಹಿಸುವ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯ ವಿವರಗಳನ್ನು ನಮೂದಿಸುವುದಕ್ಕಾಗಿ ಸಾಕಷ್ಟು ಜಾಗ ಇರತಕ್ಕದ್ದು.

(2) ಪ್ರತಿಯೊಬ್ಬ ನಿಯೋಜಕನು, ಫಲಾನುಭವಿಯು ನಿರ್ವಹಿಸುವ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯ ವಿವರಗಳನ್ನು ಗುರುತಿನ ಚೀಟಿಯಲ್ಲಿ ನಮೂದಿಸತಕ್ಕದ್ದು ಮತ್ತು ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ಗುರುತಿನ ಚೀಟಿಯನ್ನು ಫಲಾನುಭವಿಗೆ ಹಿಂತಿರುಗಿಸತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ಗುರುತಿನ ಚೀಟಿಯನ್ನು ಯಾವ ಫಲಾನುಭವಿಗೆ ನೀಡಲಾಗಿದೆಯೋ ಆ ಫಲಾನುಭವಿಯು ಪರಿಶೀಲನೆಗಾಗಿ ಸರ್ಕಾರದ ಅಥವಾ ಮಂಡಲಿಯ ಯಾರೇ ಅಧಿಕಾರಿಯು, ಯಾರೇ ಪರಿವೀಕ್ಷಕನು ಅಥವಾ ಯಾರೇ ಇತರ ಪ್ರಾಧಿಕಾರಿಯು ಕೇಳಿದಾಗಲೆಲ್ಲಾ ಪರಿಶೀಲನೆಗಾಗಿ ಅದನ್ನು ಹಾಜರುಪಡಿಸತಕ್ಕದ್ದು.

14. **ಫಲಾನುಭವಿಯಾಗಿರುವುದು ಕೊನೆಗೊಳ್ಳುವುದು.**- (1) ಈ ಅಧಿನಿಯಮದ ಮೇರೆಗೆ ಫಲಾನುಭವಿಯಾಗಿ ನೋಂದಾಯಿತನಾದ ಕಟ್ಟಡ ಕೆಲಸಗಾರನು, ಅವನಿಗೆ ಅರವತ್ತು ವರ್ಷಗಳ ವಯಸ್ಸು ತುಂಬಿದಾಗ ಅಥವಾ ಒಂದು ವರ್ಷದಲ್ಲಿ ತೊಂಬತ್ತು ದಿನಗಳಿಗಿಂತ ಕಡಿಮೆ ಇಲ್ಲದಂತೆ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ನಿರತನಾಗಿರದಿದ್ದಾಗ ಫಲಾನುಭವಿಯಾಗಿರುವುದು ಕೊನೆಗೊಳ್ಳತಕ್ಕದ್ದು:

ಪರಂತು, ಈ ಉಪ-ಪ್ರಕರಣದ ಮೇರೆಗೆ ತೊಂಬತ್ತು ದಿನಗಳ ಅವಧಿಯನ್ನು ಲೆಕ್ಕ ಹಾಕುವಾಗ, ಕಟ್ಟಡ ಕೆಲಸಗಾರನಿಗೆ ಅವನ ನಿಯೋಜನೆಯ ಕಾಲದಲ್ಲಿ ಅಪಘಾತದಿಂದ ಉಂಟಾಗುವ ಯಾವುದೇ ವೈಯಕ್ತಿಕ ಹಾನಿಯ ಕಾರಣದಿಂದಾಗಿ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿ ಕೆಲಸಕ್ಕೆ ಗೈರು ಹಾಜರಾದ ಯಾವುದೇ ಅವಧಿಯನ್ನು ಬಿಟ್ಟುಬಿಡತಕ್ಕದ್ದು.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಆ ವ್ಯಕ್ತಿಯು ಅವನಿಗೆ ಅರವತ್ತು ವಯಸ್ಸು ತುಂಬುವುದಕ್ಕೆ ನಿಕಟಪೂರ್ವದಲ್ಲಿ ನಿರಂತರವಾಗಿ ಕನಿಷ್ಠ ಮೂರು ವರ್ಷಗಳವರೆಗೆ ಫಲಾನುಭವಿಯಾಗಿದ್ದರೆ, ಅವನು ನಿಯಮಿಸಬಹುದಾದಂಥ ಸೌಲಭ್ಯಗಳನ್ನು ಪಡೆಯಲು ಅರ್ಹನಾಗಿರತಕ್ಕದ್ದು.

**ವಿವರಣೆ:**-ಈ ಉಪ-ಪ್ರಕರಣದ ಮೇರೆಗೆ ಮಂಡಳಿಯಲ್ಲಿ ಫಲಾನುಭವಿಯಾಗಿ ಮೂರು ವರ್ಷಗಳ ಅವಧಿಯನ್ನು ಲೆಕ್ಕಹಾಕುವುದಕ್ಕಾಗಿ, ವ್ಯಕ್ತಿಯು ಯಾವ ಅವಧಿಯಲ್ಲಿ ತನ್ನ ನೋಂದಣಿಗೆ ನಿಕಟಪೂರ್ವದಲ್ಲಿ ಯಾವುದೇ ಇತರೆ ಮಂಡಳಿಯಲ್ಲಿ ಫಲಾನುಭವಿಯಾಗಿದ್ದನೋ ಆ ಅವಧಿಯನ್ನು ಸೇರಿಸತಕ್ಕದ್ದು.

15. **ಫಲಾನುಭವಿಗಳ ರಿಜಿಸ್ಟರು.**- ಪ್ರತಿಯೊಬ್ಬ ನಿಯೋಜಕನು ನಿಯಮಿಸಬಹುದಾದಂಥ ನಮೂನೆಯಲ್ಲಿ ಅವನು ಕೈಗೊಂಡ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ನಿಯೋಜಿತರಾದ ಫಲಾನುಭವಿಗಳ ನಿಯೋಜನೆಯ ವಿವರಗಳನ್ನು ತೋರಿಸುವ ಒಂದು ರಿಜಿಸ್ಟರನ್ನು ನಿರ್ವಹಿಸತಕ್ಕದ್ದು ಮತ್ತು ಅದನ್ನು ಮಂಡಳಿಯ ಕಾರ್ಯದರ್ಶಿಯು ಅಥವಾ ಈ ಬಗ್ಗೆ ಮಂಡಳಿಯು ಯುಕ್ತವಾಗಿ ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಯು ಯಾವುದೇ ಪೂರ್ವ ಸೂಚನೆ ಇಲ್ಲದೆ ಪರಿಶೀಲಿಸಬಹುದು.

16. **ಕಟ್ಟಡ ಕೆಲಸಗಾರರಿಂದ ವಂತಿಗೆ.**- (1) ಈ ಅಧಿನಿಯಮದ ಮೇರೆಗೆ ಫಲಾನುಭವಿಯಾಗಿ ನೋಂದಾಯಿತನಾದ ಕಟ್ಟಡ ಕೆಲಸಗಾರನು ಅವನಿಗೆ ಅರವತ್ತು ವರ್ಷ ವಯಸ್ಸು ತುಂಬುವವರೆಗೆ, ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದರದಲ್ಲಿ ಪ್ರತಿ ತಿಂಗಳೂ ನಿಧಿಗೆ ವಂತಿಗೆ ನೀಡತಕ್ಕದ್ದು ಮತ್ತು ಕಟ್ಟಡ ಕೆಲಸಗಾರರ ಬೇರೆ ಬೇರೆ ವರ್ಗಗಳಿಗೆ ವಂತಿಗೆಯ ಬೇರೆ ಬೇರೆ ದರಗಳನ್ನು ನಿರ್ದಿಷ್ಟಪಡಿಸಬಹುದು:

ಪರಂತು, ಮಂಡಳಿಗೆ, ಫಲಾನುಭವಿಯು ಯಾವುದೇ ಹಣಕಾಸು ತೊಂದರೆಯ ಕಾರಣ ತನ್ನ ವಂತಿಗೆಯನ್ನು ಸಂದಾಯ ಮಾಡಲು ಅಸಮರ್ಥನಾಗಿದ್ದಾನೆಂದು ಮಂಡಳಿಗೆ ಮನದಟ್ಟಾದರೆ, ಒಂದು ಬಾರಿಗೆ ಮೂರು ತಿಂಗಳನ್ನು ಮೀರದ ಅವಧಿಗೆ ವಂತಿಗೆ ಸಂದಾಯ ಮಾಡುವುದನ್ನು ಮನ್ನಾ ಮಾಡಬಹುದು.

(2) ಫಲಾನುಭವಿಯು, ತನ್ನ ಮಾಸಿಕ ಮಜೂರಿಗಳಿಂದ ಅವನ ವಂತಿಗೆಯನ್ನು ಕಡಿತ ಮಾಡುವುದಕ್ಕೆ ಮತ್ತು ಹಾಗೆ ಕಡಿತ ಮಾಡಿದಂದಿನಿಂದ ಹದಿನೈದು ದಿನಗಳೊಳಗಾಗಿ ಮಂಡಳಿಗೆ ಅದನ್ನು ಜಮೆ ಮಾಡುವುದಕ್ಕೆ ಅವನ ನಿಯೋಜಕನಿಗೆ ಅಧಿಕಾರ ನೀಡಬಹುದು.

17. ವಂತಿಗೆಯನ್ನು ಸಂದಾಯ ಮಾಡದಿರುವುದರ ಪರಿಣಾಮ.– ಫಲಾನುಭವಿಯು, ನಿರಂತರವಾಗಿ ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಗೆ 16ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ತನ್ನ ವಂತಿಗೆಯನ್ನು ಸಂದಾಯ ಮಾಡದಿದ್ದಾಗ, ಅವನು ಫಲಾನುಭವಿಯಾಗಿರುವುದು ನಿಂತುಹೋಗತಕ್ಕದ್ದು:

ಪರಂತು, ಮಂಡಳಿಯು ಕಾರ್ಯದರ್ಶಿಗೆ ವಂತಿಗೆಯನ್ನು ಸಂದಾಯ ಮಾಡದಿರುವುದಕ್ಕೆ ಯುಕ್ತ ಕಾರಣವಿತ್ತೆಂದು ಮತ್ತು ಕಟ್ಟಡ ಕೆಲಸಗಾರನು ಬಾಕಿ ವಂತಿಗೆಯನ್ನು ಠೇವಣಿ ಇಡಲು ಇಚ್ಚಿಸುತ್ತಾನೆಂದು ಮನದಟ್ಟಾದರೆ, ಅವನು ಬಾಕಿಯಿರುವ ವಂತಿಗೆಯನ್ನು ಠೇವಣಿ ಇಡಲು ಕಟ್ಟಡ ಕೆಲಸಗಾರನಿಗೆ ಅನುಮತಿ ನೀಡತಕ್ಕದ್ದು ಮತ್ತು ಹಾಗೆ ವಂತಿಗೆಯನ್ನು ಠೇವಣಿ ಇಟ್ಟ ಮೇಲೆ ಕಟ್ಟಡ ಕೆಲಸಗಾರನ ನೋಂದಣಿಯನ್ನು ಪೂರ್ವಸ್ಥಿತಿಗೆ ತರತಕ್ಕದ್ದು.

## ಅಧ್ಯಾಯ – V

## ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕ್ಷೇಮಾಭಿವೃದ್ಧಿ ಮಂಡಳಿಗಳು

18. **ರಾಜ್ಯ ಕ್ಷೇಮಾಭಿವೃದ್ಧಿ ಮಂಡಳಿಗಳ ರಚನೆ.**– (1) ಪ್ರತಿಯೊಂದು ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ ಅದು ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದಕ್ಕೆ ವಹಿಸಿದ ಪ್ರಕಾರ್ಯಗಳನ್ನು ನೆರವೇರಿಸಲು ----------- (ರಾಜ್ಯದ ಹೆಸರು) ಕಟ್ಟಡ ಮತ್ತು ನಿರ್ಮಾಣ ಕೆಲಸಗಾರರ ಕ್ಷೇಮಾಭಿವೃದ್ಧಿ ಮಂಡಳಿ ಎಂದು ಕರೆಯಲಾಗುವ ಒಂದು ಮಂಡಳಿಯನ್ನು ರಚಿಸತಕ್ಕದ್ದು.

(2) ಮಂಡಳಿಯು ಮೇಲೆ ಹೇಳಿದ ಹೆಸರಿನ, ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಆ ಹೆಸರಿನಲ್ಲಿ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಮಂಡಳಿಯು, ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ವ್ಯಕ್ತಿಯಾಗಿರುವ ಅಧ್ಯಕ್ಷರನ್ನು ಮತ್ತು ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಹದಿನೈದನ್ನು ಮೀರದಷ್ಟು ಸಂಖ್ಯೆಯ ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು:

ಪರಂತು, ಮಂಡಳಿಯು ರಾಜ್ಯ ಸರ್ಕಾರವನ್ನು, ನಿಯೋಜಕರನ್ನು ಮತ್ತು ಕಟ್ಟಡ ಕೆಲಸಗಾರರನ್ನು ಪ್ರತಿನಿಧಿಸುವ ಅಷ್ಟೇ ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು ಮತ್ತು ಮಂಡಳಿಯಲ್ಲಿ ಕನಿಷ್ಠ ಒಬ್ಬ ಮಹಿಳಾ ಸದಸ್ಯೆ ಇರತಕ್ಕದ್ದು.

(4) ಮಂಡಳಿಯ ಅಧ್ಯಕ್ಷನ ಮತ್ತು ಇತರ ಸದಸ್ಯನ ನೇಮಕದ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅವರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಇತರ ಭತ್ಯೆಗಳು ಮತ್ತು ಮಂಡಳಿಯ ಸದಸ್ಯರ ಸ್ಥಾನಗಳಲ್ಲಿ ಸಾಂದರ್ಭಿಕವಾಗಿ ಉಂಟಾಗುವ ಖಾಲಿಸ್ಥಾನಗಳನ್ನು ತುಂಬುವ ರೀತಿಯು ನಿಯಮಿಸಬಹುದಾದಂತೆ ಇರತಕ್ಕದ್ದು.

19. **ಮಂಡಳಿಗಳ ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು.**– (1) ಮಂಡಳಿಯು, ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಕಾರ್ಯದರ್ಶಿಯನ್ನು ಮತ್ತು ಅವಶ್ಯವೆಂದು ಅದು ಪರಿಗಣಿಸುವಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡತಕ್ಕದ್ದು.

(2) ಮಂಡಳಿಯ ಕಾರ್ಯದರ್ಶಿಯು ಅದರ ಮುಖ್ಯ ನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು.

(3) ಮಂಡಳಿಯ ಕಾರ್ಯದರ್ಶಿಯ ಮತ್ತು ಇತರ ಅಧಿಕಾರಿಗಳ ಮತ್ತು ನೌಕರರ ನೇಮಕದ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅವರಿಗೆ ಸಂದಾಯ ಮಾಡುವ ಸಂಬಳ ಮತ್ತು ಭತ್ಯೆಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**20. ಮಂಡಳಿಗಳ ಸಭೆಗಳು.**– (1) ಮಂಡಳಿಯು, ನಿಯಮಿಸಬಹುದಾದಂಥ ಕಾಲದಲ್ಲಿ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ತನ್ನ ಸಭೆಗಳಲ್ಲಿ ನಡೆಸುವ ಕಾರ್ಯಕಲಾಪಗಳಿಗೆ ಸಂಬಂಧಿಸಿದಂತೆ (ಅಂಥ ಸಭೆಗಳಲ್ಲಿ ಇರಬೇಕಾದ ಕೋರಂ ಸೇರಿದಂತೆ) ನಿಯಮಿಸಬಹುದಾದಂಥ ಕಾರ್ಯವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು ಅಥವಾ ಯಾವುದೇ ಕಾರಣಕ್ಕಾಗಿ ಅವನು ಮಂಡಲಿಯ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಈ ಬಗ್ಗೆ ಅಧ್ಯಕ್ಷನು ನಾಮನಿರ್ದೇಶಿಸಿದ ಯಾರೇ ಇತರ ಸದಸ್ಯನು ಮತ್ತು ಅಂಥ ನಾಮನಿರ್ದೇಶಿತನು ಇಲ್ಲದಿದ್ದರೆ, ಸಭೆಯಲ್ಲಿ ಹಾಜರಿದ್ದ ಸದಸ್ಯರು ತಮ್ಮ ಪೈಕಿಯಿಂದ ಆಯ್ಕೆ ಮಾಡಿದ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಮಂಡಳಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲ ವಿಷಯಗಳನ್ನು ಸಭೆಯಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಅನುಪಸ್ಥಿತಿಯಲ್ಲಿ ಅಧ್ಯಕ್ಷತೆ ವಹಿಸಿದ ವ್ಯಕ್ತಿಯು, ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**21. ಖಾಲಿಸ್ಥಾನಗಳು, ಇತ್ಯಾದಿಗಳು ಮಂಡಳಿಯ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.**– ಮಂಡಳಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಗಳು,–

(ಎ) ಮಂಡಳಿಯಲ್ಲಿ ಯಾವುದೇ ಸ್ಥಾನವು ಖಾಲಿ ಇರುವುದೆಂಬ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿದೆಯೆಂಬ; ಅಥವಾ

(ಬಿ) ಮಂಡಳಿಯ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ದೋಷ ಇದೆಯೆಂಬ; ಅಥವಾ

(ಸಿ) ಮಂಡಲಿಯ ಕಾರ್ಯವಿಧಾನದಲ್ಲಿ ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ ಯಾವುದೇ ಅಕ್ರಮತೆಯಿದೆಯೆಂಬ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

22. ಮಂಡಳಿಯ ಪ್ರಕಾರ್ಯಗಳು.– (1) ಮಂಡಳಿಯು,–

(ಎ) ಅಪಘಾತದ ಸಂದರ್ಭದಲ್ಲಿ ಫಲಾನುಭವಿಗೆ ಕೂಡಲೇ ನೆರವು ಒದಗಿಸತಕ್ಕದ್ದು;

(ಬಿ) ಅರವತ್ತು ವರ್ಷಗಳ ವಯಸ್ಸು ತುಂಬಿರುವ ಫಲಾನುಭವಿಗಳಿಗೆ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದು;

(ಸಿ) ಗೃಹ ನಿರ್ಮಾಣಕ್ಕಾಗಿ ಫಲಾನುಭವಿಗೆ, ನಿಯಮಿಸಬಹುದಾದಂಥ ಮೊಬಲಗನ್ನು ಮೀರದಂಥ ಸಾಲಗಳನ್ನು ಮತ್ತು ಮುಂಗಡಗಳನ್ನು ನಿಯಮಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಮಂಜೂರು ಮಾಡತಕ್ಕದ್ದು;

(ಡಿ) ಫಲಾನುಭವಿಗಳ, ಸಮೂಹ–1 ವಿಮಾ ಯೋಜನೆಯ ವಿಮಾಕಂತುಗಳಿಗೆ ಸಂಬಂಧಪಟ್ಟಂತೆ ಸೂಕ್ತವೆಂದು ತಾನು ಭಾವಿಸಬಹುದಾದಂಥ ಮೊಬಲಗನ್ನು ಸಂದಾಯ ಮಾಡತಕ್ಕದ್ದು;

(ಇ) ಫಲಾನುಭವಿಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ನಿಯಮಿಸಬಹುದಾದಂಥ ಹಣಕಾಸು ನೆರವನ್ನು ನೀಡತಕ್ಕದ್ದು;

(ಎಫ್) ಫಲಾನುಭವಿಯ ಅಥವಾ ನಿಯಮಿಸಬಹುದಾದಂಥ ಅವನ ಅವಲಂಬಿತನು ತೀವ್ರ ಕಾಯಿಲೆ ಬಿದ್ದ ಸಂದರ್ಭದಲ್ಲಿ ಆ ಕಾಯಿಲೆಗಳ ಚಿಕಿತ್ಸೆಗಾಗಿ ನಿಯಮಿಸಬಹುದಾದಂಥ ವೈದ್ಯಕೀಯ ವೆಚ್ಚಗಳನ್ನು ಭರಿಸತಕ್ಕದ್ದು;

(ಜಿ) ಮಹಿಳಾ ಫಲಾನುಭವಿಗಳಿಗೆ ಪ್ರಸೂತಿ ಸೌಲಭ್ಯಕ್ಕಾಗಿ ಹಣ ಸಂದಾಯ ಮಾಡತಕ್ಕದ್ದು; ಮತ್ತು

(ಹೆಚ್) ನಿಯಮಿಸಬಹುದಾದಂಥ ಇತರ ಕ್ಷೇಮಾಭಿವೃದ್ಧಿ ಕ್ರಮಗಳಿಗೆ ಮತ್ತು ಸೌಲಭ್ಯಗಳಿಗೆ ಏರ್ಪಾಡು ಮಾಡತಕ್ಕದ್ದು ಮತ್ತು ಅವುಗಳನ್ನು ಸುಧಾರಣೆ ಮಾಡತಕ್ಕದ್ದು.

(2) ಮಂಡಳಿಯು, ಯಾವುದೇ ಕಾರ್ಯಸಂಸ್ಥೆಯಲ್ಲಿನ ಕಟ್ಟಡ ಕೆಲಸಗಾರರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು, ಅನುಮೋದಿಸಿದ ಯಾವುದೇ ಯೋಜನೆಯ ಸಹಾಯಾರ್ಥವಾಗಿ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ನಿಯೋಜಕನಿಗೆ ಸಾಲವನ್ನು ಅಥವಾ ಸಹಾಯಧನವನ್ನು ಮಂಜೂರು ಮಾಡತಕ್ಕದ್ದು.

(3) ಮಂಡಳಿಯು, ಕಟ್ಟಡ ಕೆಲಸಗಾರರ ಮತ್ತು ಅವರ ಕುಟುಂಬ ಸದಸ್ಯರ ಪ್ರಯೋಜನಕ್ಕಾಗಿ ಮಂಡಳಿಯು ನಿರ್ದಿಷ್ಟಪಡಿಸಿದ ಗುಣಮಟ್ಟದ ಕ್ಷೇಮಾಭಿವೃದ್ಧಿ ಕ್ರಮಗಳನ್ನು ಮತ್ತು ಸೌಲಭ್ಯಗಳನ್ನು ಮಂಡಳಿಗೆ ಸಮಾಧಾನವಾಗುವ ರೀತಿಯಲ್ಲಿ ಒದಗಿಸುವ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ನಿಯೋಜಕನಿಗೆ ವಾರ್ಷಿಕವಾಗಿ ಸಹಾಯಾನುದಾನವನ್ನು ಸಂದಾಯ ಮಾಡಬಹುದು, ಆದರೆ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ನಿಯೋಜಕನಿಗೆ ಸಹಾಯಾನುದಾನದ ರೂಪದಲ್ಲಿ ಸಂದಾಯ ಮಾಡುವ ಮೊಬಲಗು,–

(ಎ) ರಾಜ್ಯ ಸರ್ಕಾರವು ಅಥವಾ ಈ ಬಗ್ಗೆ ಅದು ನಿರ್ದಿಷ್ಟಪಡಿಸಿದ ಯಾರೇ ವ್ಯಕ್ತಿಯು ನಿರ್ಧರಿಸಿದಂತೆ ಕ್ಷೇಮಾಭಿವೃದ್ಧಿ ಕ್ರಮಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಖರ್ಚು ಮಾಡಿದ ಮೊಬಲಗು; ಅಥವಾ

(ಬಿ) ನಿಯಮಿಸಬಹುದಾದಂಥ ಮೊಬಲಗು

– ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮೀರತಕ್ಕದ್ದಲ್ಲ:

ಪರಂತು, ಯಾವುದೇ ಅಂಥ ಕ್ಷೇಮಾಭಿವೃದ್ಧಿ ಕ್ರಮಗಳಿಗೆ ಮತ್ತು ಸೌಲಭ್ಯಗಳಿಗೆ ಸಂಬಂಧಿಸಿದಂತೆ ಅವುಗಳ ಮೇಲೆ ಖರ್ಚು ಮಾಡಿದ ಮೇಲೆ ಹೇಳಿದಂತೆ ನಿರ್ಧರಿಸಿದ ಮೊಬಲಗು ಈ ಬಗ್ಗೆ ನಿಯಮಿಸಿದ ಮೊಬಲಗಿಗಿಂತ ಕಡಿಮೆ ಇದ್ದರೆ, ಸಹಾಯಾನುದಾನವನ್ನು ಸಂದಾಯ ಮಾಡತಕ್ಕದ್ದಲ್ಲ.

23. **ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು.**– ಕೇಂದ್ರ ಸರ್ಕಾರವು, ಈ ಸಂಬಂಧವಾಗಿ ಸಂಸತ್ತು ಕಾನೂನಿನ ಮೂಲಕ ಯುಕ್ತವಾಗಿ ಹಣದ ಹಂಚಿಕೆ ಮಾಡಿದ ನಂತರ ಸರ್ಕಾರವು ಅವಶ್ಯವೆಂದು ಪರಿಗಣಿಸಬಹುದಾದಂಥ ಮೊತ್ತದ ಅನುದಾನಗಳನ್ನು ಮತ್ತು ಸಾಲಗಳನ್ನು ಮಂಡಳಿಗೆ ನೀಡಬಹುದು.

24. **ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕ್ಷೇಮಾಭಿವೃದ್ಧಿ ನಿಧಿ ಮತ್ತು ಅದರ ವಿನಿಯೋಗ.**– (1) ಮಂಡಳಿಯು ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕ್ಷೇಮಾಭಿವೃದ್ಧಿ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಅದಕ್ಕೆ,–

(ಎ) 23ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಮಂಡಳಿಗೆ ನೀಡಿದ ಯಾವುದೇ ಅನುದಾನಗಳನ್ನು ಮತ್ತು ಸಾಲಗಳನ್ನು;

(ಬಿ) ಫಲಾನುಭವಿಗಳು ನೀಡಿದ ಎಲ್ಲ ವಂತಿಗೆಗಳನ್ನು;

(ಸಿ) ಕೇಂದ್ರ ಸರ್ಕಾರವು ತೀರ್ಮಾನಿಸಬಹುದಾದಂಥ ಇತರ ಮೂಲಗಳಿಂದ ಮಂಡಳಿಯು ಸ್ವೀಕರಿಸಿದ ಎಲ್ಲಾ ಮೊತ್ತಗಳನ್ನು

– ಜಮೆ ಮಾಡತಕ್ಕದ್ದು.

(2) ನಿಧಿಯನ್ನು,–

(ಎ) 22ನೇ ಪ್ರಕರಣದ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಮಂಡಳಿಯು ಮಾಡಿದ ಖರ್ಚು ವೆಚ್ಚಗಳನ್ನು; ಮತ್ತು

(ಬಿ) ಮಂಡಳಿಯ ಸದಸ್ಯರ, ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳಗಳು, ಭತ್ಯೆಗಳು ಮತ್ತು ಇತರ ಸಂಭಾವನೆಯನ್ನು; ಮತ್ತು

(ಸಿ) ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಗುರಿ ಮತ್ತು ಉದ್ದೇಶಗಳಿಗಾಗಿ ಮಾಡಿದ ಖರ್ಚು ವೆಚ್ಚಗಳನ್ನು

– ಭರಿಸುವುದಕ್ಕಾಗಿ ವಿನಿಯೋಗ ಮಾಡತಕ್ಕದ್ದು.

(3) ಯಾವುದೇ ಮಂಡಳಿಯು, ಯಾವುದೇ ಹಣಕಾಸು ವರ್ಷದ ಅವಧಿಯಲ್ಲಿ ಅದರ ಸದಸ್ಯರ, ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳಗಳನ್ನು, ಭತ್ಯೆಗಳನ್ನು ಮತ್ತು ಇತರ ಪರಿಶ್ರಮ ಧನವನ್ನು ಸಂದಾಯ ಮಾಡುವುದಕ್ಕೆ ಮತ್ತು ಇತರ ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವುದಕ್ಕೆ ಆ ಹಣಕಾಸು ವರ್ಷದಲ್ಲಿ ಅದರ ಒಟ್ಟು ವೆಚ್ಚಗಳ ಶೇಕಡ ಐದರಷ್ಟನ್ನು ಮೀರಿ ಖರ್ಚುಗಳನ್ನು ಮಾಡತಕ್ಕದ್ದಲ್ಲ.

25. **ಆಯವ್ಯಯ ಪತ್ರ.–** ಮಂಡಳಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರತಿಯೊಂದು ಹಣಕಾಸು ವರ್ಷದಲ್ಲಿ ಮಂಡಳಿಯ ಅಂದಾಜು ಜಮೆಗಳು ಮತ್ತು ವೆಚ್ಚಗಳನ್ನು ತೋರಿಸುವ ಮುಂದಿನ ಹಣಕಾಸು ವರ್ಷದ ಅದರ ಆಯವ್ಯಯ ಪತ್ರವನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

26. **ವಾರ್ಷಿಕ ವರದಿ.–** ಮಂಡಳಿಯು, ಪ್ರತಿ ಹಣಕಾಸು ವರ್ಷದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಹಿಂದಿನ ಹಣಕಾಸು ವರ್ಷದ ಅದರ ಚಟುವಟಿಕೆಗಳ ಪೂರ್ಣ ವಿವರಣೆಯನ್ನು ನೀಡುವ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

27. **ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಮಂಡಳಿಯು, ಲೆಕ್ಕಪತ್ರಗಳನ್ನು ಮತ್ತು ಇತರ ಸಂಬಂಧಪಟ್ಟ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಭಾರತದ ನಿಯಂತ್ರಕ – ಹಾಗೂ – ಮಹಾಲೆಕ್ಕ ಪರಿಶೋಧಕರೊಂದಿಗೆ ಸಮಾಲೋಚಿಸಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಲೆಕ್ಕಪತ್ರಗಳ ಒಂದು ವಾರ್ಷಿಕ ವಿವರಪತ್ರವನ್ನು ಸಿದ್ಧಪಡಿಸತಕ್ಕದ್ದು.

(2) ಭಾರತದ ನಿಯಂತ್ರಕ – ಹಾಗೂ – ಮಹಾಲೆಕ್ಕ ಪರಿಶೋಧಕನು ಅಥವಾ ಈ ಅಧಿನಿಯಮದ ಮೇರೆಗೆ ಮಂಡಳಿಯ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡುವ ಸಂಬಂಧದಲ್ಲಿ ಅವನಿಂದ ನೇಮಕಗೊಂಡ ಯಾರೇ ಇತರ ವ್ಯಕ್ತಿಯು, ಭಾರತದ ನಿಯಂತ್ರಕ – ಹಾಗೂ – ಮಹಾಲೆಕ್ಕಪರಿಶೋಧಕರು ಸರ್ಕಾರಿ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡುವ ಸಂಬಂಧದಲ್ಲಿ ಅಂಥ ಲೆಕ್ಕಪರಿಶೋಧನೆಯ ಬಗ್ಗೆ ಹೊಂದಿರುವ ಅಂಥವೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದರಲ್ಲೂ ವಿಶೇಷವಾಗಿ, ಈ ಅಧಿನಿಯಮದ ಮೇರೆಗೆ ಮಂಡಳಿಯ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಿಸಿದ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಕೇಳುವ ಮತ್ತು ಮಂಡಳಿಯ ಯಾವುವೇ ಕಚೇರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(3) ಮಂಡಳಿಯ ಲೆಕ್ಕಪತ್ರಗಳನ್ನು ಪ್ರತಿಯೊಂದು ವರ್ಷವು ಭಾರತದ ನಿಯಂತ್ರಕ – ಹಾಗೂ – ಮಹಾಲೆಕ್ಕಪರಿಶೋಧಕನು ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಮಾಡಲಾದ ಯಾವುದೇ ವೆಚ್ಚವನ್ನು ಭಾರತದ ನಿಯಂತ್ರಕ – ಹಾಗೂ – ಮಹಾಲೆಕ್ಕ ಪರಿಶೋಧಕರಿಗೆ ಮಂಡಳಿಯು ಸಂದಾಯ ಮಾಡತಕ್ಕದ್ದು.

(4) ಮಂಡಳಿಯು ನಿಯಮಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಲೆಕ್ಕಪರಿಶೋಧಕರ ವರದಿಯೊಂದಿಗೆ ಲೆಕ್ಕಪತ್ರಗಳ ಪರಿಶೋಧಿತ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು.

(5) ರಾಜ್ಯ ಸರ್ಕಾರವು, ವಾರ್ಷಿಕ ವರದಿಯನ್ನು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಇರಿಸತಕ್ಕದ್ದು.

## ಅಧ್ಯಾಯ – VI

### ಕಟ್ಟಡ ಕೆಲಸಗಾರರ ಕೆಲಸದ ಗಂಟೆಗಳು, ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ಸೇವೆಯ ಇತರ ಷರತ್ತುಗಳು

**28. ಸಾಮಾನ್ಯ ಕೆಲಸದ ದಿನದಲ್ಲಿ ಕೆಲಸದ ವೇಳೆಯನ್ನು ನಿಗದಿಪಡಸುವುದು, ಇತ್ಯಾದಿ.–** (1) ಸಮುಚಿತ ಸರ್ಕಾರವು, ನಿಯಮಗಳ ಮೂಲಕ,–

(ಎ) ಕಟ್ಟಡದ ಕೆಲಸಗಾರರಿಗೆ ಒಂದು ಅಥವಾ ಹೆಚ್ಚು ನಿರ್ದಿಷ್ಟಪಡಿಸಿದ ಬಿಡುವುಗಳೂ ಸೇರಿದಂತೆ ಎಷ್ಟು ಗಂಟೆಗಳ ಕೆಲಸದ ಅವಧಿಯು ಒಂದು ಸಾಮಾನ್ಯ ಕೆಲಸದ ದಿನವಾಗುತ್ತದೋ ಆ ಅವಧಿಯನ್ನು ನಿಗದಿಪಡಿಸಬಹುದು;

(ಬಿ) ಪ್ರತಿ ಏಳು ದಿನಗಳ ಅವಧಿಯಲ್ಲಿ ಎಲ್ಲ ಕಟ್ಟಡ ಕೆಲಸಗಾರರಿಗೆ ಅನುಮತಿಸಲಾಗುವಂಥ ಒಂದು ದಿನ ವಿಶ್ರಾಂತಿಗೆ ಮತ್ತು ಅಂಥ ವಿಶ್ರಾಂತಿ ದಿನದ ಸಂಬಂಧದಲ್ಲಿ ಸಂಭಾವನೆಯನ್ನು ಸಂದಾಯ ಮಾಡಲು ಉಪಬಂಧ ಕಲ್ಪಿಸಬಹುದು;

(ಸಿ) ವಿಶ್ರಾಂತಿ ದಿನದಂದು ಮಾಡಿದ ಕೆಲಸಕ್ಕೆ 29ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಓವರ್‌ಟೈಮ್ ದರಕ್ಕಿಂತ ಕಡಿಮೆ ಇಲ್ಲದ ದರದಲ್ಲಿ ಹಣ ಸಂದಾಯ ಮಾಡಲು ಉಪಬಂಧ ಕಲ್ಪಿಸಬಹುದು.

(2) ಉಪ-ಪ್ರಕರಣ (1)ರ ಉಪಬಂಧಗಳು, ನಿಯಮಿಸಬಹುದಾದಷ್ಟರಮಟ್ಟಿಗೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಮಾತ್ರವೇ ಈ ಕೆಳಕಂಡ ಕಟ್ಟಡ ಕೆಲಸಗಾರರ ವರ್ಗಗಳ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು, ಎಂದರೆ:–

(ಎ) ಜರೂರು ಕೆಲಸದಲ್ಲಿ ಅಥವಾ ಮುಂಗಾಣಲಾಗದಂಥ ಅಥವಾ ತಡೆಗಟ್ಟಲಾಗದಂಥ ಆ ಯಾವುದೇ ತುರ್ತು ಕೆಲಸದಲ್ಲಿ ತೊಡಗಿರುವ ವ್ಯಕ್ತಿಗಳು;

(ಬಿ) ನಿಯಮಗಳಲ್ಲಿ ಗೊತ್ತುಪಡಿಸಿರುವ ಸಾಮಾನ್ಯ ಕೆಲಸದ ಗಂಟೆಯನ್ನು ಮೀರಿ ಅವಶ್ಯವಾಗಿ ನೆರವೇರಿಸಲೇಬೇಕಾದಂಥ ಸಿದ್ಧತಾ ಸ್ವರೂಪದ ಕೆಲಸದಲ್ಲಿ ಅಥವಾ ಪೂರಕ ಕೆಲಸದಲ್ಲಿ ತೊಡಗಿರುವ ವ್ಯಕ್ತಿಗಳು;

(ಸಿ) ಯಾವ ಕೆಲಸವನ್ನು ತಾಂತ್ರಿಕ ಕಾರಣಗಳಿಗಾಗಿ ಆ ದಿನ ಮುಗಿಯುವುದಕ್ಕೆ ಮುಂಚೆ ಪೂರ್ಣಗೊಳಿಸಬೇಕಾಗಿದೆಯೋ ಆ ಯಾವುದೇ ಕೆಲಸದಲ್ಲಿ ತೊಡಗಿರುವ ವ್ಯಕ್ತಿಗಳು;

(ಡಿ) ನೈಸರ್ಗಿಕ ಬಲಗಳ ಅನಿಯತ ಕ್ರಿಯೆಯ ಮೇಲೆ ಅವಲಂಬಿತವಾಗಿರುವ ಕಾಲಗಳಲ್ಲಿ ಹೊರತು ಯಾವ ಕೆಲಸ ಮಾಡಲು ಸಾಧ್ಯವಿಲ್ಲವೋ ಆ ಕೆಲಸದಲ್ಲಿ ತೊಡಗಿರುವ ವ್ಯಕ್ತಿಗಳು.

29. **ಓವರ್ ಟೈಂ ಕೆಲಸ ಮಾಡಿದ್ದಕ್ಕೆ ಮಜೂರಿ.–** (1) ಯಾರೇ ಕಟ್ಟಡ ಕೆಲಸಗಾರನನ್ನು ಎಷ್ಟು ಗಂಟೆಗಳ ಅವಧಿಯು ಒಂದು ಸಾಮಾನ್ಯ ಕೆಲಸದ ದಿನವಾಗುತ್ತದೋ ಆ ಅವಧಿಗೂ ಮೀರಿ ಯಾವುದೇ ಕೆಲಸದ ದಿನದಂದು ಕೆಲಸ ಮಾಡಲು ಅಗತ್ಯಪಡಿಸಿರುವಲ್ಲಿ ಅವನು, ತನ್ನ ಮಜೂರಿಯ, ಸಾಮಾನ್ಯ ದರದ ಎರಡರಷ್ಟು ದರದ ಮಜೂರಿಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ, "ಮಜೂರಿಗಳ ಸಾಮಾನ್ಯ ದರಗಳು" ಎಂದರೆ ಕೆಲಸಗಾರನು ತತ್ಕಾಲದಲ್ಲಿ ಪಡೆಯಲು ಹಕ್ಕುಳ್ಳ ಮೂಲ ಮಜೂರಿ ಮತ್ತು ಭತ್ಯೆಗಳು, ಆದರೆ ಯಾವುದೇ ಬೋನಸ್ ಒಳಗೊಳ್ಳುವುದಿಲ್ಲ.

**30. ರಿಜಿಸ್ಟರುಗಳು ಮತ್ತು ದಾಖಲೆಗಳ ನಿರ್ವಹಣೆ.–** (1) ಪ್ರತಿಯೊಬ್ಬ ನಿಯೋಜಕನು, ತಾನು ನಿಯೋಜಿಸಿಕೊಂಡಿರುವಂಥ ಕಟ್ಟಡ ಕೆಲಸಗಾರರ, ಅವರು ನಿರ್ವಹಿಸಿದ ಕೆಲಸದ, ಎಷ್ಟು ಗಂಟೆಗಳ ಅವಧಿಯು ಅವರಿಗೆ ಒಂದು ಸಾಮಾನ್ಯ ಕೆಲಸದ ದಿನವಾಗುತ್ತದೆಯೋ ಆ ಅವಧಿಯ, ಏಳು ದಿನಗಳ ಅವಧಿಯಲ್ಲಿ ಅವರಿಗೆ ಅನುಮತಿಸಿರುವಂಥ ವಿಶ್ರಾಂತಿ ದಿನದ, ಅವರಿಗೆ ಸಂದಾಯ ಮಾಡಿದ ಮಜೂರಿಗಳ, ಅವರು ನೀಡಿದ ಸ್ವೀಕೃತಿಗಳ ವಿವರಗಳನ್ನು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಇತರ ವಿವರಗಳನ್ನು ನೀಡುವ ಅಂಥ ರಿಜಿಸ್ಟರುಗಳನ್ನು ಮತ್ತು ಅಂಥ ದಾಖಲೆಗಳನ್ನು ನಿರ್ವಹಿಸತಕ್ಕದ್ದು.

(2) ಪ್ರತಿಯೊಬ್ಬ ನಿಯೋಜಕನು, ಕೆಲಸಗಾರರನ್ನು ಯಾವ ಸ್ಥಳದಲ್ಲಿ ನಿಯೋಜಿಸಿಕೊಳ್ಳಲಾಗುವುದೋ ಆ ಸ್ಥಳದಲ್ಲಿ, ನಿಯಮಿಸಿದ ವಿವರಗಳನ್ನೊಳಗೊಂಡ ನೋಟೀಸ್‌ಗಳನ್ನು ನಿಯಮಿಸಿದ ನಮೂನೆಯಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರದರ್ಶಿಸತಕ್ಕದ್ದು.

(3) ಸಮುಚಿತ ಸರ್ಕಾರವು, ನಿಯಮಗಳ ಮೂಲಕ, ಕಾರ್ಯಸಂಸ್ಥೆಯಲ್ಲಿ ನಿಯೋಜಿಸಿಕೊಂಡಿರುವ ಕಟ್ಟಡ ಕೆಲಸಗಾರರಿಗೆ ಮಜೂರಿ ಪುಸ್ತಕಗಳನ್ನು ಅಥವಾ ಮಜೂರಿ ಚೀಟಿಗಳನ್ನು ನೀಡುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಮತ್ತು ನಮೂದುಗಳನ್ನು ಯಾವ ರೀತಿಯಲ್ಲಿ ಮಾಡಬೇಕೋ ಆ ರೀತಿಯನ್ನು ಮತ್ತು ನಿಯೋಜಕನು ಅಥವಾ ಅವನ ಏಜೆಂಟನು ಅಂಥ ಮಜೂರಿ ಪುಸ್ತಕಗಳಲ್ಲಿ ಅಥವಾ ಮಜೂರಿ ಚೀಟಿಗಳಲ್ಲಿ ಯಾವ ರೀತಿ ಅಧಿಪ್ರಮಾಣೀಕರಿಸಬೇಕೋ ಆ ರೀತಿಯನ್ನು ನಿಯಮಿಸತಕ್ಕದ್ದು.

**31. ಕೆಲವು ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಗಳಲ್ಲಿ ಕೆಲವು ವ್ಯಕ್ತಿಗಳ ನಿಯೋಜನೆಗೆ ನಿಷೇಧ.–** ಯಾವ ವ್ಯಕ್ತಿಯು, ಕಿವುಡಾಗಿದ್ದಾನೆ ಅಥವಾ ದೃಷ್ಟಿದೋಷವಿರುವನಾಗಿದ್ದಾನೆ ಅಥವಾ ಆಗಾಗ ತಲೆಸುತ್ತುವ ಸಮಸ್ಯೆ ಇರುವವನೆಂದು ನಿಯೋಜಕನಿಗೆ ತಿಳಿದಿದೆಯೋ ಅಥವಾ ನಂಬಲು ಕಾರಣವಿದೆಯೋ ಅಂಥ ಯಾರೇ ವ್ಯಕ್ತಿಯನ್ನು, ಸ್ವತಃ ಕಟ್ಟಡ ಕೆಲಸಗಾರನಿಗೆ ಅಥವಾ ಇತರ ಯಾರೇ ವ್ಯಕ್ತಿಗೆ ಯಾವುದೇ ಅಪಘಾತದ ಅಪಾಯ ಉಂಟಾಗುವ ಸಂಭವವಿರುವಂಥ ಯಾವುದೇ ಕಟ್ಟಡ ಕೆಲಸದಲ್ಲಿ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ಮಾಡುವಂತೆ ಅಗತ್ಯಪಡಿಸತಕ್ಕದ್ದಲ್ಲ ಅಥವಾ ಕೆಲಸ ಮಾಡಲು ಅವಕಾಶ ನೀಡತಕ್ಕದ್ದಲ್ಲ.

**32. ಕುಡಿಯುವ ನೀರು.–** (1) ನಿಯೋಜಕನು, ಯಾವ ಸ್ಥಳದಲ್ಲಿ ಕಟ್ಟಡ ಅಥವಾ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೋ ಅಂಥ ಪ್ರತಿಯೊಂದು ಸ್ಥಳದಲ್ಲಿ ಅಲ್ಲಿ ನಿಯೋಜಿತರಾಗಿರುವ ಎಲ್ಲ ವ್ಯಕ್ತಿಗಳಿಗೆ ಅನುಕೂಲಕರವಾದ ಸೂಕ್ತ ಜಾಗಗಳಲ್ಲಿ ಆರೋಗ್ಯಕರವಾದ ಸಾಕಷ್ಟು ಕುಡಿಯುವ ನೀರನ್ನು ಸರಬರಾಜು ಮಾಡುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಪರಿಣಾಮಕಾರಿಯಾದ ಏರ್ಪಾಟುಗಳನ್ನು ಮಾಡತಕ್ಕದ್ದು.

(2) ಅಂಥ ಎಲ್ಲ ಜಾಗಗಳಲ್ಲಿಯೂ, ಅಂಥ ಸ್ಥಳಗಲ್ಲಿ ನಿಯೋಜಿತರಾಗಿರುವ ಬಹುಸಂಖ್ಯೆಯ ವ್ಯಕ್ತಿಗಳಿಗೆ ಅರ್ಥವಾಗುವಂಥ ಭಾಷೆಯಲ್ಲಿ "ಕುಡಿಯುವ ನೀರು" ಎಂದು ಸ್ಪಷ್ಟವಾಗಿ ಬರೆದಿರಬೇಕು ಮತ್ತು ಅಂಥ ಯಾವುದೇ ಜಾಗವು ಯಾವುದೇ ತೊಳೆಯುವ ಜಾಗದಿಂದ, ಮೂತ್ರಾಲಯದಿಂದ ಅಥವಾ ಶೌಚಾಲಯದಿಂದ ಆರು ಮೀಟರ್‌ಗಳೊಳಗೆ ಇರತಕ್ಕದ್ದಲ್ಲ.

33. **ಶೌಚಾಲಯಗಳು ಮತ್ತು ಮೂತ್ರಾಲಯಗಳು.–** ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯು ಎಲ್ಲಿ ನಡೆಯುತ್ತಿದೆಯೋ ಆ ಪ್ರತಿಯೊಂದು ಸ್ಥಳದಲ್ಲಿ, ನಿಯಮಿಸಬಹುದಾದಂಥ ಬಗೆಗಳ ಶೌಚಾಲಯಗಳನ್ನು ಮತ್ತು ಮೂತ್ರಾಲಯಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ನಿಯೋಜಕನು ಒದಗಿಸತಕ್ಕದ್ದು ಮತ್ತು ಕಟ್ಟಡ ಕೆಲಸಗಾರರು ಅಂಥ ಸ್ಥಳಗಳಲ್ಲಿರುವಾಗ ಎಲ್ಲ ಸಮಯಗಳಲ್ಲಿಯೂ ಅವುಗಳನ್ನು ಅವರು ಬಳಸಲು ಅನುಕೂಲಕರವಾದ ರೀತಿಯಲ್ಲಿ ಅವು ಇರತಕ್ಕದ್ದು:

ಪರಂತು, ಐವತ್ತಕ್ಕಿಂತ ಕಡಿಮೆ ಕೆಲಸಗಾರರನ್ನು ಎಲ್ಲಿ ನಿಯೋಜಿಸಿಕೊಳ್ಳಲಾಗಿದೆಯೋ ಅಥವಾ ಶೌಚಾಲಯಗಳನ್ನು ನೀರು ಹರಿದು ಹೋಗುವ ಒಳಚರಂಡಿಗೆ ಎಲ್ಲಿ ಸಂಪರ್ಕ ಕಲ್ಪಿಸಲಾಗಿದೆಯೋ ಆ ಯಾವುದೇ ಸ್ಥಳದಲ್ಲಿ ಮೂತ್ರಾಲಯಗಳನ್ನು ಒದಗಿಸುವ ಅವಶ್ಯಕತೆ ಇರತಕ್ಕದ್ದಲ್ಲ.

**34. ಸ್ಥಳಾವಕಾಶ.–** (1) ನಿಯೋಜಕನು ತಾನು ನಿಯೋಜಿಸಿಕೊಂಡಿರುವ ಎಲ್ಲ ಕಟ್ಟಡ ಕೆಲಸಗಾರರಿಗೆ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವಂಥ ಅವಧಿಯಲ್ಲಿ ಉಚಿತವಾಗಿ ಮತ್ತು ಕಾಮಗಾರಿಯ ಸ್ಥಳದೊಳಗೆ ಅಥವಾ ಸಾಧ್ಯವಾದಷ್ಟು ಅದರ ಹತ್ತಿರದಲ್ಲಿ ವಾಸಿಸಲು ತಾತ್ಕಾಲಿಕ ಸ್ಥಳಾವಕಾಶ ಒದಗಿಸತಕ್ಕದ್ದು.

(2) ಉಪ–ಪ್ರಕರಣ (1)ರ ಮೇರೆಗೆ ಒದಗಿಸಿದ ತಾತ್ಕಾಲಿಕ ಸ್ಥಳಾವಕಾಶದಲ್ಲಿ ಅಡುಗೆ ಮಾಡಲು ಪ್ರತ್ಯೇಕವಾದ ಜಾಗವನ್ನು, ಸ್ನಾನ ಮಾಡಲು ಜಾಗವನ್ನು, ಬಟ್ಟೆ ಒಗೆಯಲು ಜಾಗವನ್ನು ಮತ್ತು ಶೌಚಾಲಯ ಸೌಲಭ್ಯಗಳನ್ನು ಹೊಂದಿರತಕ್ಕದ್ದು.

(3) (1)ನೇ ಉಪ–ಪ್ರಕರಣದ ಮೇರೆಗೆ ಅಗತ್ಯಪಡಿಸಿದಂತೆ ಕಟ್ಟಡ ಕೆಲಸಗಾರರಿಗೆ ವಾಸಿಸಲು ಸ್ಥಳಾವಕಾಶ, ಅಡುಗೆ ಮಾಡಲು ಜಾಗವನ್ನು ಅಥವಾ ಇತರ ಸೌಕರ್ಯಗಳನ್ನು ಒದಗಿಸುವ ಉದ್ದೇಶಕ್ಕಾಗಿ ನಿಯೋಜಕನು ನಿರ್ಮಿಸಿದ್ದ ತಾತ್ಕಾಲಿಕ ನಿರ್ಮಿತಿಗಳನ್ನು ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡ ನಂತರ, ಸಾಧ್ಯವಾದಷ್ಟು ಬೇಗನೆ, ಅವನು ತನ್ನ ಸ್ವಂತ ಖರ್ಚಿನಲ್ಲಿ ತೆಗೆದುಹಾಕಲು ಅಥವಾ ಕೆಡವಿ ಹಾಕಲು ಕ್ರಮ ಕೈಗೊಳ್ಳತಕ್ಕದ್ದು ಮತ್ತು ನೆಲವನ್ನು ಮಟ್ಟ ಮಾಡಿ ಮತ್ತು ಚೊಕ್ಕಟ ಮಾಡಿ ಪೂರ್ವಸ್ಥಿತಿಗೆ ತರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಕಟ್ಟಡ ಕೆಲಸಗಾರರಿಗೆ ತಾತ್ಕಾಲಿಕ ಸ್ಥಳಾವಕಾಶ ಒದಗಿಸುವ ಉದ್ದೇಶಕ್ಕಾಗಿ ಪುರಸಭಾ ಮಂಡಲಿಯು ಅಥವಾ ಯಾವುದೇ ಇತರ ಸ್ಥಳೀಯ ಪ್ರಾಧಿಕಾರವು ಯಾವುದೇ ಭೂಮಿಯನ್ನು ನಿಯೋಜಕನಿಗೆ ನೀಡಿರುವ ಸಂದರ್ಭದಲ್ಲಿ ಅವನು, ನಿರ್ಮಾಣ ಕಾಮಗಾರಿಯು ಪೂರ್ಣಗೊಂಡ ನಂತರ ಆದಷ್ಟು ಬೇಗನೆ, ಅಂಥ ಭೂಮಿಯ ಸ್ವಾಧೀನವನ್ನು ಅವನು ಅದನ್ನು ಯಾವ ಸ್ಥಿತಿಯಲ್ಲಿ ಪಡೆದಿದ್ದನೋ ಅದೇ ಸ್ಥಿತಿಯಲ್ಲಿ ಹಿಂತಿರುಗಿಸತಕ್ಕದ್ದು.

**35. ಶಿಶುಧಾಮ.–** (1) ಐವತ್ತಕ್ಕಿಂತ ಹೆಚ್ಚು ಮಹಿಳಾ ಕೆಲಸಗಾರರನ್ನು ಸಾಮಾನ್ಯವಾಗಿ ಯಾವ ಸ್ಥಳದಲ್ಲಿ ನಿಯೋಜಿಸಿಕೊಳ್ಳಲಾಗಿದೆಯೋ ಆ ಪ್ರತಿಯೊಂದು ಸ್ಥಳದಲ್ಲಿ, ಅಂಥ ಮಹಿಳಾ ಕೆಲಸಗಾರರ ಆರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳ ಉಪಯೋಗಕ್ಕಾಗಿ ಸೂಕ್ತವಾದ ಕೊಠಡಿಯನ್ನು ಅಥವಾ ಕೊಠಡಿಗಳನ್ನು ಒದಗಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಅಂಥ ಕೊಠಡಿಗಳು,–

(ಎ) ಸಾಕಷ್ಟು ಸ್ಥಳಾವಕಾಶವನ್ನು ಒದಗಿಸುವಂತಿರತಕ್ಕದ್ದು;

(ಬಿ) ಅವುಗಳಲ್ಲಿ ಸಾಕಷ್ಟು ಬೆಳಕು ಮತ್ತು ಗಾಳಿ ವ್ಯವಸ್ಥೆ ಇರತಕ್ಕದ್ದು;

(ಸಿ) ಅವುಗಳನ್ನು ಚೊಕ್ಕಟವಾಗಿ ಮತ್ತು ನೈರ್ಮಲ್ಯ ಸ್ಥಿತಿಯಲ್ಲಿ ಇಡತಕ್ಕದ್ದು;

(ಡಿ) ಅವುಗಳು ಮಕ್ಕಳ ಮತ್ತು ಶಿಶುಗಳ ಪಾಲನೆಯಲ್ಲಿ ತರಬೇತಿ ಹೊಂದಿರುವ ಮಹಿಳೆಯ ಪ್ರಭಾರದಲ್ಲಿರತಕ್ಕದ್ದು.

**36. ಪ್ರಥಮ ಚಿಕಿತ್ಸೆ.–** ಪ್ರತಿಯೊಬ್ಬ ನಿಯೋಜಕನು, ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಗಳು ನಡೆಯುತ್ತಿರುವ ಎಲ್ಲ ಸ್ಥಳಗಳಲ್ಲಿ ನಿಯಮಿಸಬಹುದಾದಂಥ ಪ್ರಥಮ ಚಿಕಿತ್ಸಾ ಸೌಕರ್ಯಗಳನ್ನು ಒದಗಿಸತಕ್ಕದ್ದು.

**37. ಕ್ಯಾಂಟಿನ್‌ಗಳು, ಇತ್ಯಾದಿ.–** ಸಮುಚಿತ ಸರ್ಕಾರವು,–

(ಎ) ಸಾಮಾನ್ಯವಾಗಿ ಇನ್ನೂರೈವತ್ತಕ್ಕಿಂತ ಕಡಿಮೆ ಇಲ್ಲದಷ್ಟು ಕೆಲಸಗಾರರನ್ನು ನಿಯೋಜಿಸಿಕೊಳ್ಳಲಾಗಿರುವ ಪ್ರತಿಯೊಂದು ಸ್ಥಳದಲ್ಲಿ ಅಂಥ ಕೆಲಸಗಾರರ ಉಪಯೋಗಕ್ಕಾಗಿ ಒಂದು ಕ್ಯಾಂಟಿನ್ ಒದಗಿಸುವಂತೆ ಮತ್ತು ನಿರ್ವಹಿಸುವಂತೆ;

(ಬಿ) ಕಟ್ಟಡ ಕೆಲಸಗಾರರ ಅನುಕೂಲಕ್ಕಾಗಿ ನಿಯಮಿಸಬಹುದಾದಂಥ ಇತರ ಕ್ಷೇಮಾಭಿವೃದ್ಧಿ ಕ್ರಮಗಳಿಗೆ ಅವಕಾಶ ಕಲ್ಪಿಸುವಂತೆ

– ನಿಯಮಗಳ ಮೂಲಕ ನಿಯೋಜಕನನ್ನು ಅಗತ್ಯಪಡಿಸಬಹುದು.

## ಅಧ್ಯಾಯ – VII

### ಸುರಕ್ಷೆ ಮತ್ತು ಆರೋಗ್ಯ ಕ್ರಮಗಳು

**38. ಸುರಕ್ಷಾ ಸಮಿತಿ ಮತ್ತು ಸುರಕ್ಷಾ ಅಧಿಕಾರಿಗಳು.–** (1) ಸಾಮಾನ್ಯವಾಗಿ ಐದು ನೂರು ಅಥವಾ ಅದಕ್ಕೂ ಹೆಚ್ಚು ಕಟ್ಟಡ ಕೆಲಸಗಾರರನ್ನು ನಿಯೋಜಿಸಿಕೊಂಡಿರುವ ಪ್ರತಿಯೊಂದು ಕಾರ್ಯಸಂಸ್ಥೆಯಲ್ಲಿಯೂ, ರಾಜ್ಯ ಸರ್ಕಾರವು ನಿಯಮಿಸಬಹುದಾದಷ್ಟು ಸಂಖ್ಯೆಯ ನಿಯೋಜಕರ ಮತ್ತು ಕಟ್ಟಡ ಕೆಲಸಗಾರರ ಪ್ರತಿನಿಧಿಗಳನ್ನೊಳಗೊಂಡ ಒಂದು ಸುರಕ್ಷಾ ಸಮಿತಿಯನ್ನು ನಿಯೋಜಕನು ರಚಿಸತಕ್ಕದ್ದು:

ಪರಂತು, ಕೆಲಸಗಾರರನ್ನು ಪ್ರತಿನಿಧಿಸುವ ವ್ಯಕ್ತಿಗಳ ಸಂಖ್ಯೆಯು, ಯಾವುದೇ ಸಂದರ್ಭದಲ್ಲೂ ನಿಯೋಜಕರನ್ನು ಪ್ರತಿನಿಧಿಸುವ ವ್ಯಕ್ತಿಗಳ ಸಂಖ್ಯೆಗಿಂತ ಕಡಿಮೆ ಇರತಕ್ಕದ್ದಲ್ಲ.

(2) ಉಪ–ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಪ್ರತಿಯೊಂದು ಕಾರ್ಯಸಂಸ್ಥೆಯಲ್ಲಿ, ನಿಯೋಜಕನು, ನಿಯಮಿಸಬಹುದಾದ ಅರ್ಹತೆಗಳನ್ನು ಹೊಂದಿರತಕ್ಕಂಥ ಮತ್ತು ಅಂಥ ಕರ್ತವ್ಯಗಳನ್ನು ಪಾಲಿಸತಕ್ಕಂಥ ಸುರಕ್ಷಾ ಅಧಿಕಾರಿಯನ್ನು ಸಹ ನೇಮಕ ಮಾಡತಕ್ಕದ್ದು.

**39. ಕೆಲವು ಅಪಘಾತಗಳ ಬಗ್ಗೆ ನೋಟಿಸ್.–** (1) ಯಾವುದೇ ಕಾರ್ಯಸಂಸ್ಥೆಯಲ್ಲಿ ಮರಣಕ್ಕೆ ಕಾರಣವಾದ ಅಥವಾ ದೈಹಿಕ ಹಾನಿಗೆ ಕಾರಣವಾದ ಅಪಘಾತ ಉಂಟಾದಲ್ಲಿ, ದೈಹಿಕ ಹಾನಿ ಉಂಟಾದ ಕಾರಣದಿಂದಾಗಿ ಹಾಗೆ ಹಾನಿಗೊಳಗಾದ ವ್ಯಕ್ತಿಗೆ ಅಪಘಾತದ ನಿಕಟ ತರುವಾಯ ನಲವತ್ತೆಂಟು ಗಂಟೆಗಳ ಕಾಲ ಅಥವಾ ಅದಕ್ಕೂ ಹೆಚ್ಚಿನ ಕಾಲ ಕೆಲಸ ಮಾಡಲಾಗದಿದ್ದಲ್ಲಿ ಅಥವಾ

ಅಂಥ ಹಾನಿಯು ನಿಯಮಿಸಬಹುದಾದಂಥ ಸ್ವರೂಪದ್ದಾಗಿದ್ದಲ್ಲಿ, ನಿಯೋಜಕನು ನಿಯಮಿಸಬಹುದಾದಂಥ ಪ್ರಾಧಿಕಾರಕ್ಕೆ ಅಂಥ ನಮೂನೆಯಲ್ಲಿ ಮತ್ತು ಅಂಥ ಕಾಲದೊಳಗೆ ಆ ಅಪಘಾತದ ಬಗ್ಗೆ ನೋಟೀಸು ನೀಡತಕ್ಕದ್ದು.

(2) ಉಪ–ಪ್ರಕರಣ (1)ರ ಮೇರೆಗಿನ ನೋಟಿಸನ್ನು ಸ್ವೀಕರಿಸಿದ ನಂತರ, ಆ ಉಪ–ಪ್ರಕರಣದಲ್ಲಿ ತಿಳಿಸಿದ ಪ್ರಾಧಿಕಾರವು ಅವಶ್ಯವೆಂದು ತಾನು ಭಾವಿಸುವಂಥ ತನಿಖೆಯನ್ನು ಅಥವಾ ವಿಚಾರಣೆಯನ್ನು ಮಾಡಬಹುದು.

(3) ಉಪ–ಪ್ರಕರಣ (1)ರ ಮೇರೆಗೆ ನೀಡಿದ ನೋಟೀಸು ಐದು ಅಥವಾ ಅದಕ್ಕೂ ಹೆಚ್ಚು ವ್ಯಕ್ತಿಗಳ ಮರಣಕ್ಕೆ ಕಾರಣವಾದ ಅಪಘಾತಕ್ಕೆ ಸಂಬಂಧಿಸಿದ್ದರೆ, ಪ್ರಾಧಿಕಾರವು ನೋಟೀಸು ಸ್ವೀಕರಿಸಿದ ಒಂದು ತಿಂಗಳೊಳಗಾಗಿ ಅಂಥ ಅಪಘಾತದ ಬಗ್ಗೆ ವಿಚಾರಣೆಯನ್ನು ನಡೆಸತಕ್ಕದ್ದು.

**40. ಕಟ್ಟಡ ಕೆಲಸಗಾರರ ಸುರಕ್ಷೆಗಾಗಿ ಮತ್ತು ಆರೋಗ್ಯಕ್ಕಾಗಿ ನಿಯಮಗಳನ್ನು ರಚಿಸಲು ಸಮುಚಿತ ಸರ್ಕಾರದ ಅಧಿಕಾರ.–** (1) ಸಮುಚಿತ ಸರ್ಕಾರವು, ಕಟ್ಟಡ ಕೆಲಸಗಾರರ ನಿಯೋಜನೆಯ ಅವಧಿಯಲ್ಲಿ ಅವರ ಸುರಕ್ಷತೆಗೆ ಮತ್ತು ಆರೋಗ್ಯಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳ ಸಂಬಂಧದಲ್ಲಿ ಮತ್ತು ಅಂಥ ನಿಯೋಜನೆಯ ಅವಧಿಯಲ್ಲಿ ಅವರ ಸುರಕ್ಷೆ, ಆರೋಗ್ಯ ಮತ್ತು ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅವರಿಗೆ ಒದಗಿಸಬೇಕಾದ ಅವಶ್ಯಕ ಸಾಧನ ಸಾಮಗ್ರಿಗಳನ್ನು ಮತ್ತು ಸಲಕರಣೆಗಳನ್ನು ಒದಗಿಸುವ ಬಗ್ಗೆ ಅಧಿಸೂಚನೆ ಮೂಲಕ ನಿಯಮಗಳನ್ನು ರಚಿಸತಕ್ಕದ್ದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ನೆಲದ ಮೇಲಿನಿಂದ ಅಥವಾ ಕಟ್ಟಡದ ಯಾವುದೇ ಭಾಗದ ಮೇಲಿಂದ ಅಥವಾ ಏಣಿಯ ಮೇಲಿಂದ ಅಥವಾ ಅಂಥ ಇತರ ಆಧಾರದ ಮೇಲಿನಿಂದ ಸುರಕ್ಷಿತವಾಗಿ ಕೆಲಸ ಮಾಡಲು ಸಾಧ್ಯವಿಲ್ಲದಿದ್ದಾಗ ವಿವಿಧ ಹಂತಗಳಲ್ಲಿ ಸೂಕ್ತವಾದ ಮತ್ತು ಸಾಕಷ್ಟು ಸಾರುವೆ ಕಟ್ಟುವುದು ಸೇರಿದಂತೆ ಕೆಲಸ ನಡೆಯುವ ಯಾವುದೇ ಸ್ಥಳಕ್ಕೆ ಸುರಕ್ಷಿತವಾಗಿ ಹೋಗಿಬರುವುದು ಮತ್ತು ಆ ಕೆಲಸದ ಸ್ಥಳದ ಸುರಕ್ಷತೆ;

(ಬಿ) ಸಕ್ಷಮ ವ್ಯಕ್ತಿಯ ಮೇಲ್ವಿಚಾರಣೆಯಲ್ಲಿ ಇಡೀ ಕಟ್ಟಡವನ್ನು ಅಥವಾ ಇತರ ನಿರ್ಮಿತಿಯನ್ನು ಅಥವಾ ಅದರ ಯಾವುದೇ ಗಣನೀಯ ಭಾಗವನ್ನು ಕೆಡವಿ ಹಾಕುವ ಸಂಬಂಧದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಮತ್ತು ಕಟ್ಟಿದ ಕಟ್ಟಡದ ಅಥವಾ ಇತರ ನಿರ್ಮಿತಿಯ ಯಾವುದೇ ಭಾಗವನ್ನು ತೆಗೆದುಹಾಕಿರುವಾಗ ಯಾವುದೇ ಕಟ್ಟಡವು ಅಥವಾ ಇತರ ನಿರ್ಮಿತಿಯು ಕುಸಿಯುವುದರಿಂದ ಉಂಟಾಗುವ ಅಪಾಯವನ್ನು ಆ ಕಟ್ಟಡಕ್ಕೆ ಅಥವಾ ನಿರ್ಮಿತಿಗೆ ಊರೆ ಕೊಡುವ ಮೂಲಕ ಅಥವಾ ಇತರ ರೀತಿಯಲ್ಲಿ ತಪ್ಪಿಸುವುದು;

(ಸಿ) ಸ್ಫೋಟಕಗಳಿಂದ ಅಥವಾ ಹಾರುವ ಸಾಮಗ್ರಿಗಳಿಂದ ಹಾನಿ ಉಂಟಾಗುವ ಅಪಾಯಕೀಡಾಗುವುದನ್ನು ತಪ್ಪಿಸುವ ರೀತಿಯಲ್ಲಿ ಸಕ್ಷಮ ವ್ಯಕ್ತಿಗಳ ನಿಯಂತ್ರಣದಲ್ಲಿ ಸ್ಫೋಟಕಗಳನ್ನು ನಿರ್ವಹಿಸುವುದು ಅಥವಾ ಬಳಸುವುದು;

(ಡಿ) ಲೋಕೊಮೋಟೀವ್‌ಗಳು, ಟ್ರಕ್‌ಗಳು, ವ್ಯಾಗನ್‌ಗಳು ಮತ್ತು ಇತರ ವಾಹನಗಳು ಹಾಗೂ ಟ್ರೈಲರ್‌ಗಳಂಥ ಸಾಗಣೆ ಸಾಧನಗಳನ್ನು ನಿರ್ಮಿಸುವುದು, ಬಳಕೆಗೆ ಅನುಗೊಳಿಸುವುದು, ಬಳಸುವುದು ಮತ್ತು ನಿರ್ವಹಿಸುವುದು ಮತ್ತು ಅಂಥ ಸಾಧನಗಳನ್ನು ಚಾಲನೆ ಮಾಡುವುದಕ್ಕೆ ಅಥವಾ ನಡೆಸುವುದಕ್ಕೆ ಸಕ್ಷಮ ವ್ಯಕ್ತಿಗಳನ್ನು ನೇಮಿಸುವುದು;

(ಇ) ನಿಯತಕಾಲಿಕ ಪರೀಕ್ಷೆ ಮತ್ತು ಪರಿಶೀಲನೆ ಮತ್ತು ಹೀಟ್ ಟ್ರೀಟ್‌ಮೆಂಟ್ ಸೇರಿದಂತೆ ಹಾಇಸ್ಟ್‌ಗಳನ್ನು, ಲಿಫ್ಟಿಂಗ್ ಸಲಕರಣೆಗಳನ್ನು ಮತ್ತು ಲಿಫ್ಟಿಂಗ್ ಗೇರುಗಳನ್ನು ನಿರ್ಮಿಸುವುದು ಬಳಕೆಗೆ ಅನುಗೊಳಿಸುವುದು, ಬಳಸುವುದು ಮತ್ತು ನಿಷೇಧಿಸುವುದು ಮತ್ತು ಲೋಡ್‌ಗಳನ್ನು ಮೇಲಕ್ಕೆ ಎತ್ತುವಾಗ ಅಥವಾ ಕೆಳಕ್ಕೆ ಇಳಿಸುವಾಗ ಅವಶ್ಯವಿರುವಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ವ್ಯಕ್ತಿಗಳನ್ನು ಸಾಗಿಸುವ ವಾಹನಗಳ ಮೇಲೆ ನಿರ್ಬಂಧಗಳು ಮತ್ತು ಹಾಇಸ್ಟ್‌ಗಳಿಗೆ ಅಥವಾ ಇತರೆ ಲಿಫ್ಟಿಂಗ್ ಸಲಕರಣೆಗೆ ಸಕ್ಷಮ ವ್ಯಕ್ತಿಗಳ ನೇಮಕ;

(ಎಫ್) ಪ್ರತಿಯೊಂದು ಕೆಲಸದ ಸ್ಥಳದಲ್ಲಿ ಮತ್ತು ಆ ಸ್ಥಳಕ್ಕೆ ಹೋಗಿಬರುವ ದಾರಿಯಲ್ಲಿ, ಹಾಇಸ್ಟ್‌ಗಳನ್ನು, ಲಿಫ್ಟಿಂಗ್ ಸಲಕರಣೆಗಳನ್ನು ಅಥವಾ ಲಿಫ್ಟಿಂಗ್ ಗೇರ್‌ಗಳನ್ನು ಬಳಸಿ ಮೇಲಕ್ಕೆ ಎತ್ತುವ ಅಥವಾ ಕೆಳಕ್ಕೆ ಇಳಿಸುವ ಕೆಲಸಗಳು ನಡೆಯುತ್ತಿರುವ ಪ್ರತಿಯೊಂದು ಸ್ಥಳದಲ್ಲಿ ಮತ್ತು ನಿಯೋಜಿತರಾದ ಕಟ್ಟಡ ಕೆಲಸಗಾರರಿಗೆ ಅಪಾಯಕಾರಿಯಾದ ಎಲ್ಲ ತೆರೆದ ಜಾಗಗಳಲ್ಲಿ ಸಾಕಷ್ಟು ಮತ್ತು ಸೂಕ್ತ ಬೆಳಕಿನ ವ್ಯವಸ್ಥೆ;

(ಜಿ) ಯಾವುದೇ ಗ್ರೈಂಡಿಗ್ ಕೆಲಸದ, ಕ್ಲೀನಿಂಗ್ ಕೆಲಸದ, ಸ್ಪ್ರೈಯಿಂಗ್ ಕೆಲಸದ ಅಥವಾ ಯಾವುದೇ ವಸ್ತುವನ್ನು ನಿರ್ವಹಿಸುವ ಸಮಯದಲ್ಲಿ ಉಂಟಾಗುವ ಧೂಳನ್ನು, ಹೊಗೆಯನ್ನು, ಅನಿಲವನ್ನು ಅಥವಾ ಆವಿಯನ್ನು ಸೇವಿಸುವುದನ್ನು ತಡೆಯಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಮತ್ತು ಪ್ರತಿಯೊಂದು ಕೆಲಸದ ಸ್ಥಳದಲ್ಲಿ ಅಥವಾ ಆವೃತ ಜಾಗಗಳಲ್ಲಿ ಸಾಕಷ್ಟು ಗಾಳಿ, ಬೆಳಕು ಇರುವಂತೆ ಖಚಿತಪಡಿಸಿಕೊಳ್ಳಲು ಮತ್ತು ನಿರ್ವಹಿಸಲು ತೆಗೆದುಕೊಳ್ಳಬೇಕಾದ ಕ್ರಮಗಳು;

(ಹೆಚ್) ಸಾಮಗ್ರಿಗಳನ್ನು ಅಥವಾ ಸರಕುಗಳನ್ನು ರಾಶಿ ಹಾಕುವಾಗ ಅಥವಾ ರಾಶಿ ಹಾಕಿದ್ದನ್ನು ತೆಗೆದು ಸಾಗಿಸುವಾಗ, ತುಂಬುವಾಗ ಅಥವಾ ತುಂಬಿರುವುದನ್ನು ತೆಗೆದು ಬರಿದು ಮಾಡುವಾಗ ಅಥವಾ ಅದಕ್ಕೆ ಸಂಬಂಧಿಸಿದ ಕೆಲಸವನ್ನು ನಿರ್ವಹಿಸುವಾಗ ತೆಗೆದುಕೊಳ್ಳಬೇಕಾದ ಕ್ರಮಗಳು;

(ಐ) ಪ್ರತಿಯೊಂದು ಫ್ಲೈವೀಲ್‌ಗೆ ಮತ್ತು ಪ್ರೈಂ ಮೂವರ್‌ನ ಪ್ರತಿಯೊಂದು ಚಲಿಸುವ ಭಾಗಕ್ಕೆ ಮತ್ತು ವಹನ ಯಂತ್ರೋಪಕರಣದ ಅಥವಾ ಇತರ ಯಂತ್ರೋಪಕರಣದ ಯಾವುದೇ ಭಾಗಕ್ಕೆ, ಅದು ಯಾವುದೇ

ಕಾರ್ಯಾಚರಣೆಯಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬ ಕೆಲಸಗಾರನ ಸುರಕ್ಷತೆಗೆ ಧಕ್ಕೆಯಾಗದಂಥ ಸ್ಥಾನದಲ್ಲಿ ಇದ್ದ ಹೊರತು ಅಥವಾ ಆ ರೀತಿಯಲ್ಲಿ ಅದನ್ನು ನಿರ್ಮಾಣ ಮಾಡಿದ್ದ ಹೊರತು ಅವುಗಳಿಗೆ ಬೇಲಿ ಹಾಕುವುದೂ ಸೇರಿದಂತೆ ಯಂತ್ರೋಪಕರಣವನ್ನು ಸಂರಕ್ಷಿಸುವುದು;

(ಜೆ) ಕಂಪ್ರೆಸ್ಡ್ ಏರ್‌ನಿಂದ ನಡೆಸುವ ಉಪಕರಣಗಳು ಮತ್ತು ಸಾಧನ ಸಾಮಗ್ರಿಗಳೂ ಸೇರಿದಂತೆ ಸ್ಥಾವರದ ಸುರಕ್ಷತೆ ನಿರ್ವಹಣೆ ಮತ್ತು ಬಳಕೆ;

(ಕೆ) ಬೆಂಕಿ ಆಕಸ್ಮಿಕದ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು;

(ಎಲ್) ಕೆಲಸಗಾರರು ಎತ್ತುವಂಥ ಅಥವಾ ಸಾಗಿಸುವಂಥ ತೂಕದ ಮಿತಿಗಳು;

(ಎಂ) ಯಾವುದೇ ಕೆಲಸದ ಸ್ಥಳಕ್ಕೆ ಅಥವಾ ಅಲ್ಲಿಂದ ಕೆಲಸಗಾರರನ್ನು ಜಲಮಾರ್ಗದ ಮೂಲಕ ಸುರಕ್ಷಿತವಾಗಿ ಸಾಗಿಸುವುದು ಮತ್ತು ನೀರಿನಲ್ಲಿ ಮುಳುಗದಂತೆ ರಕ್ಷಿಸಲು ಸಾಧನಗಳನ್ನು ಒದಗಿಸುವುದು;

(ಎನ್) ವಿದ್ಯುತ್ ಯಂತ್ರೋಪಕರಣಗಳು ಮತ್ತು ಉಪಕರಣಗಳು ಸೇರಿದಂತೆ ವಿದ್ಯುತ್ ಹರಿಯುತ್ತಿರುವ ತಂತಿಗಳಿಂದ ಅಥವಾ ಸಲಕರಣೆಗಳಿಂದ ಮತ್ತು ಮೇಲೆ ಎತ್ತರದಲ್ಲಿ ಎಳೆದಿರುವ ತಂತಿಗಳಿಂದ ಕೆಲಸಗಾರರಿಗೆ ಉಂಟಾಗುವ ಅಪಾಯವನ್ನು ತಡೆಯಲು ತೆಗೆದುಕೊಳ್ಳಬೇಕಾದ ಕ್ರಮಗಳು;

(ಓ) ಕೆಲಸದ ವಿಶೇಷ ಸ್ವರೂಪದಿಂದಾಗಿ ಅಥವಾ ಸನ್ನಿವೇಶಗಳಿಂದಾಗಿ ಕೆಲಸಗಾರರ ಸುರಕ್ಷೆಗಾಗಿ, ಸುರಕ್ಷಾ ಬಲೆಗಳು, ಸುರಕ್ಷಾ ಶೀಟುಗಳು ಮತ್ತು ಸುರಕ್ಷಾ ಬೆಲ್ಟ್‌ಗಳು ಅವಶ್ಯಕವಾದಾಗ ಅವುಗಳನ್ನು ಇಟ್ಟುಕೊಂಡಿರುವುದು;

(ಪಿ) ಸಾರುವೆ ಕಟ್ಟುವುದು, ಏಣಿಗಳು ಮತ್ತು ಮೆಟ್ಟಿಲುಗಳು, ಲಿಫ್ಟಿಂಗ್ ಉಪಕರಣಗಳು, ಹಗ್ಗಗಳು, ಸರಪಳಿಗಳು ಮತ್ತು ಸಹಾಯಕ ಸಾಧನಸಲಕರಣೆಗಳು, ಅರ್ಥ್ ಮೂವಿಂಗ್ ಸಾಧನಸಲಕರಣೆಗಳು ಮತ್ತು ಫ್ಲೋಟಿಂಗ್ ಆಪರೇಷನಲ್ ಇಕ್ಯೂಪ್‌ಮೆಂಟ್‌ಗಳ ಸಂಬಂಧದಲ್ಲಿ ಪಾಲಿಸಬೇಕಾದ ಗುಣಮಟ್ಟಗಳು;

(ಕ್ಯೂ) ಪೈಲ್ ಡ್ರೈವಿಂಗ್‌ಗೆ, ಕಾಂಕ್ರಿಟ್ ಕೆಲಸಕ್ಕೆ ಬಿಸಿ ಡಾಂಬರು ಕೆಲಸಕ್ಕೆ, ಟಾರ್ ಅಥವಾ ಅಂಥದ್ದೇ ಇತರ ವಸ್ತುಗಳಿಗೆ, ಇನ್‌ಸುಲೇಷನ್ ಕೆಲಸಕ್ಕೆ, ಕೆಡವಿ ಹಾಕುವ ಕಾರ್ಯಾಚರಣೆಗಳಿಗೆ, ಅಗೆತದ ಕೆಲಸಕ್ಕೆ, ನೆಲದಡಿಯ ನಿರ್ಮಾಣಕ್ಕೆ ಮತ್ತು ನಿರ್ವಹಣಾ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು;

(ಆರ್) ಸುರಕ್ಷಾ ನೀತಿ ಎಂದರೆ ಕಟ್ಟಡ ಕೆಲಸಗಾರರ ಸುರಕ್ಷೆಯನ್ನು ಮತ್ತು ಆರೋಗ್ಯವನ್ನು ಸುನಿಶ್ಚಿತಪಡಿಸಿಕೊಳ್ಳಲು ತೆಗೆದುಕೊಳ್ಳಬೇಕಾದ ಕ್ರಮಗಳಿಗೆ, ಅವುಗಳಿಗಾಗಿ ಮಾಡಬೇಕಾದ ಆಡಳಿತಾತ್ಮಕ ಏರ್ಪಾಡುಗಳಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಿಸಿದ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ನಡೆಸಲಾಗುವ ಕಾರ್ಯಾಚರಣೆಗಳಿಗಾಗಿ ನಿಯೋಜಕರು ಮತ್ತು ಕಂಟ್ರಾಕ್ಟರುಗಳು ರೂಪಿಸುವಂಥ ನೀತಿ;

(ಎಸ್) ಭಾರತೀಯ ಮಾನಕಗಳ ಸಂಸ್ಥೆ ಅಧಿನಿಯಮ, 1986 (1986ರ 63)ರ ಮೇರೆಗೆ ಸ್ಥಾಪಿಸಿದ ಭಾರತೀಯ ಮಾನಕಗಳ ಸಂಸ್ಥೆಗೆ, ಕಟ್ಟಡದಲ್ಲಿ ಅಥವಾ ನಿರ್ಮಾಣ ಕಾಮಗಾರಿಯಲ್ಲಿ ಈ ಅಧಿನಿಯಮದ ವ್ಯಾಪ್ತಿಯೊಳಗೆ ಬರುವ ಯಾವುದೇ ವಸ್ತುವನ್ನು ಅಥವಾ ವಿಧಾನವನ್ನು ಬಳಸುವುದಕ್ಕೆ ಸಂಬಂಧಿಸಿದಂತೆ ಒದಗಿಸಬೇಕಾದ ಮಾಹಿತಿ;

(ಟಿ) ಕಟ್ಟಡ ಕೆಲಸಗಾರರಿಗಾಗಿ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದು ಮತ್ತು ನಿರ್ವಹಿಸುವುದು;

(ಯು) ಯಾವುದೇ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ನಡೆಸುತ್ತಿರುವ ಯಾವುದೇ ಕಾರ್ಯಾಚರಣೆಗಳಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರ ಸುರಕ್ಷೆಗೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಯಾವುದೇ ಇತರ ವಿಷಯಗಳು.

**41. ಸುರಕ್ಷಾ ಕ್ರಮಗಳಿಗಾಗಿ ಮಾದರಿ ನಿಯಮಗಳನ್ನು ರಚಿಸುವುದು.**– ಕೇಂದ್ರ ಸರ್ಕಾರವು, 5ನೇ ಪ್ರಕರಣದ ಮೇರೆಗೆ ರಚಿಸಿದ ತಜ್ಞ ಸಮಿತಿಯ ಶಿಫಾರಸುಗಳನ್ನು ಪರಿಶೀಲಿಸಿದ ನಂತರ, 40ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ವಿಷಯಗಳ ಸಂಬಂಧದಲ್ಲಿ ಮಾದರಿ ನಿಯಮಗಳನ್ನು ರಚಿಸಬಹುದು ಮತ್ತು ಅಂಥ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅಂಥ ಯಾವುದೇ ಮಾದರಿ ನಿಯಮಗಳನ್ನು ರಚಿಸಿದ್ದರೆ, ಸಮುಚಿತ ಸರ್ಕಾರವು, 40ನೇ ಪ್ರಕರಣದ ಮೇರೆಗೆ ಆ ವಿಷಯಕ್ಕೆ ಸಂಬಂಧಿಸಿದಂತೆ ಯಾವುವೇ ನಿಯಮಗಳನ್ನು ರಚಿಸುವಾಗ, ಅಂಥ ನಿಯಮಗಳನ್ನು ಕಾರ್ಯಸಾಧ್ಯವಾದಷ್ಟುಮಟ್ಟಿಗೆ ಅಂಥ ಮಾದರಿ ನಿಯಮಗಳಿಗೆ ಅನುಗುಣವಾಗಿರುವಂತೆ ರಚಿಸತಕ್ಕದ್ದು.

## ಅಧ್ಯಾಯ – VIII

### ಪರಿವೀಕ್ಷಣಾ ಸಿಬ್ಬಂದಿ

42. **ಮಹಾನಿರ್ದೇಶಕನ, ಮುಖ್ಯ ಪರಿವೀಕ್ಷಕನ ಮತ್ತು ಪರಿವೀಕ್ಷಕರುಗಳ ನೇಮಕ.**– (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಆ ಸರ್ಕಾರದ ಗೆಜೆಟೆಡ್ ಅಧಿಕಾರಿಯನ್ನು ಪರಿವೀಕ್ಷಣಾ ಮಹಾನಿರ್ದೇಶಕನನ್ನಾಗಿ ನೇಮಕ ಮಾಡತಕ್ಕದ್ದು. ಅವನು ಪರಿವೀಕ್ಷಣೆಯ ಗುಣಮಟ್ಟಗಳನ್ನು ಗೊತ್ತುಪಡಿಸಲು ಜವಾಬ್ದಾರನಾಗಿರತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಯಾವ ಕಾರ್ಯಸಂಸ್ಥೆಗಳಿಗೆ ಸಮುಚಿತ ಸರ್ಕಾರವಾಗಿದೆಯೋ ಆ ಎಲ್ಲ ಕಾರ್ಯಸಂಸ್ಥೆಗಳ ಸಂಬಂಧದಲ್ಲಿ, ಭಾರತದಾದ್ಯಂತ ಪರಿವೀಕ್ಷಕರ ಅಧಿಕಾರಗಳನ್ನು ಸಹ ಚಲಾಯಿಸತಕ್ಕದ್ದು.

(2) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಆ ಸರ್ಕಾರದ ಗೆಜೆಟೆಡ್ ಅಧಿಕಾರಿಯನ್ನು ಕಟ್ಟಡ ಮತ್ತು ನಿರ್ಮಾಣ ಪರಿವೀಕ್ಷಣಾ ಮುಖ್ಯ ಪರಿವೀಕ್ಷಕನನ್ನಾಗಿ ನೇಮಕ ಮಾಡತಕ್ಕದ್ದು, ಅವನು ರಾಜ್ಯದಲ್ಲಿ ಈ ಅಧಿನಿಯಮದ

ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಜವಾಬ್ದಾರನಾಗಿರತಕ್ಕದ್ದು ಮತ್ತು ರಾಜ್ಯ ಸರ್ಕಾರವು ಯಾವ ಕಾರ್ಯಸಂಸ್ಥೆಗಳ ಸಂಬಂಧದಲ್ಲಿ ಸಮುಚಿತ ಸರ್ಕಾರವಾಗಿದೆಯೋ ಆ ಕಾರ್ಯಸಂಸ್ಥೆಗಳ ಸಂಬಂಧದಲ್ಲಿ ರಾಜ್ಯದಾದ್ಯಂತ ಈ ಅಧಿನಿಯಮದ ಮೇರೆಗೆ ಪರಿವೀಕ್ಷಕರ ಅಧಿಕಾರಗಳನ್ನು ಸಹ ಚಲಾಯಿಸತಕ್ಕದ್ದು.

(3) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ತಾನು ಸೂಕ್ತವೆಂದು ಭಾವಿಸುವಷ್ಟು ಸಂಖ್ಯೆಯ ತನ್ನ ಅಧಿಕಾರಿಗಳನ್ನು ಪರಿವೀಕ್ಷಕರನ್ನಾಗಿ ನೇಮಕ ಮಾಡತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸುವಂಥ ಸ್ಥಳೀಯ ಸರಹದ್ದುಗಳನ್ನು ಅವರಿಗೆ ಗೊತ್ತುಪಡಿಸಬಹುದು.

(4) ಈ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಪರಿವೀಕ್ಷಕನು ಮಹಾನಿರ್ದೇಶಕನ ಅಥವಾ ಸಂದರ್ಭಾನುಸಾರ ಮುಖ್ಯ ಪರಿವೀಕ್ಷಕನ ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು ಮತ್ತು ಮಹಾನಿರ್ದೇಶಕನ ಅಥವಾ ಮುಖ್ಯ ಪರಿವೀಕ್ಷಕನ ಸಾಮಾನ್ಯ ನಿಯಂತ್ರಣಕ್ಕೆ ಮತ್ತು ಮೇಲ್ವಿಚಾರಣೆಗೊಳಪಟ್ಟು ತನ್ನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(5) ಮಹಾನಿರ್ದೇಶಕನನ್ನು, ಮುಖ್ಯ ಪರಿವೀಕ್ಷಕನನ್ನು ಮತ್ತು ಪ್ರತಿಯೊಬ್ಬ ಪರಿವೀಕ್ಷಕನನ್ನು ಭಾರತ ದಂಡ ಸಂಹಿತೆಯ (1860ರ 45)ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**43. ಪರಿವೀಕ್ಷಕರ ಅಧಿಕಾರಗಳು.**- (1) ಈ ಬಗ್ಗೆ ರಚಿಸಿದ ಯಾವುವೇ ನಿಯಮಗಳಿಗೆ ಒಳಪಟ್ಟು, ಪರಿವೀಕ್ಷಕನು, ಅವನು ಯಾವ ಸ್ಥಳೀಯ ಸರಹದ್ದುಗಳಿಗೆ ನೇಮಕಗೊಂಡಿರುವನೋ ಆ ಸ್ಥಳೀಯ ಸರಹದ್ದುಗಳ ಒಳಗೆ,-

(ಎ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಇಡಬೇಕೆಂದು ಅಥವಾ ಪ್ರದರ್ಶಿಸಬೇಕೆಂದು ಅಗತ್ಯಪಡಿಸಲಾದ ಯಾವುದೇ ರಿಜಿಸ್ಟರನ್ನು ಅಥವಾ ದಾಖಲೆಯನ್ನು ಅಥವಾ ನೋಟೀಸುಗಳನ್ನು ಪರಿಶೀಲಿಸುವ ಮತ್ತು ಪರಿಶೀಲನೆಗಾಗಿ ಅವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವ ಉದ್ದೇಶಕ್ಕಾಗಿ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯು ನಡೆಯುತ್ತಿರುವ ಯಾವುದೇ ಆವರಣವನ್ನು ಅಥವಾ ಸ್ಥಳವನ್ನು ಎಲ್ಲ ಸಮಂಜಸ ವೇಳೆಗಳಲ್ಲಿ ಸರ್ಕಾರದ ಯಾವುದೇ ಸ್ಥಳೀಯ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದ ಸೇವೆಯಲ್ಲಿರುವ ವ್ಯಕ್ತಿಗಳಾಗಿರುವಂಥ ತಾನು ಸೂಕ್ತವೆಂದು ಭಾವಿಸುವಂಥ ಸಹಾಯಕರಗಳೊಂದಿಗೆ (ಯಾರಾದರೂ ಇದ್ದರೆ) ಪ್ರವೇಶಿಸಬಹುದು;

(ಬಿ) ಅಂಥ ಯಾವುದೇ ಆವರಣಗಳಲ್ಲಿ ಅಥವಾ ಸ್ಥಳದಲ್ಲಿ ಯಾರು ತನ್ನ ಕಣ್ಣಿಗೆ ಬೀಳುವನೋ ಮತ್ತು ಅವನು ಅಲ್ಲಿ ನಿಯೋಜಿತನಾಗಿರುವ ಕಟ್ಟಡ ಕೆಲಸಗಾರನೆಂದು ನಂಬಲು ತನಗೆ ಯುಕ್ತ ಕಾರಣವಿದೆಯೋ ಆ ಯಾರೇ ವ್ಯಕ್ತಿಯನ್ನು ಪರೀಕ್ಷಿಸಬಹುದು;

(ಸಿ) ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯನ್ನು ಯಾರೇ ಕಟ್ಟಡ ಕೆಲಸಗಾರನಿಗೆ ಬಿಟ್ಟುಕೊಡುವ ಯಾರೇ ವ್ಯಕ್ತಿಯನ್ನು ಆ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯನ್ನು ಯಾವ ವ್ಯಕ್ತಿಗಳಿಗೆ ಬಿಟ್ಟುಕೊಡಲಾಗಿದೆಯೋ ಅಥವಾ ಯಾವ ವ್ಯಕ್ತಿಗಳ ಪರವಾಗಿ ತೆಗೆದುಕೊಳ್ಳಲಾಗಿದೆಯೋ ಆ ವ್ಯಕ್ತಿಗಳ ಹೆಸರುಗಳಿಗೆ ಮತ್ತು ವಿಳಾಸಗಳಿಗೆ ಸಂಬಂಧಿಸಿದಂತೆ ಮತ್ತು ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಗೆ ಮಾಡಬೇಕಾದ ಹಣ ಸಂದಾಯಗಳಿಗೆ ಸಂಬಂಧಿಸಿದಂತೆ ಯಾವ ಮಾಹಿತಿಯನ್ನು ನೀಡಲು ಅವನು ಅಧಿಕಾರ ಹೊಂದಿರುವನೋ ಆ ಯಾವುದೇ ಮಾಹಿತಿಯನ್ನು ನೀಡುವಂತೆ ಅಗತ್ಯಪಡಿಸಬಹುದು;

(ಡಿ) ಈ ಅಧಿನಿಯಮದ ಮೇರೆಗಿನ ಯಾವ ಅಪರಾಧವನ್ನು ನಿಯೋಜಕನು ಮಾಡಿದ್ದಾನೆಂದು ನಂಬಲು ತನಗೆ ಕಾರಣವಿದೆಯೋ ಆ ಅಪರಾಧದ ಸಂಬಂಧದಲ್ಲಿ ಸುಸಂಗತವೆಂದು ತಾನು ಪರಿಗಣಿಸಬಹುದಾದಂಥ ರಿಜಿಸ್ಟರನ್ನು, ಮಜೂರಿಗಳ ದಾಖಲೆಯನ್ನು ಅಥವಾ ನೋಟೀಸುಗಳನ್ನು ಅಥವಾ ಅವುಗಳ ಭಾಗಗಳನ್ನು ವಶಪಡಿಸಿಕೊಳ್ಳಬಹುದು ಅಥವಾ ಅವುಗಳ ಪ್ರತಿಗಳನ್ನು ತೆಗೆದುಕೊಳ್ಳಬಹುದು; ಮತ್ತು

(ಇ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ, ಮಹಾನಿರ್ದೇಶಕನು ಅಥವಾ ಸಂದರ್ಭಾನುಸಾರ ಮುಖ್ಯ ಪರಿವೀಕ್ಷಕನು ನಿಯಮಿಸಬಹುದಾದಂಥ ಅರ್ಹತೆಗಳನ್ನು ಮತ್ತು ಅನುಭವಗಳನ್ನು ಹೊಂದಿರುವಂಥ ಪರಿಣತರನ್ನು ಅಥವಾ ಏಜೆನ್ಸಿಗಳನ್ನು ಅಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ನಿಯೋಜಿಸಿಕೊಳ್ಳಬಹುದು.

(3) ಉಪ-ಪ್ರಕರಣ (1)ರ ಮೇರೆಗೆ ಪರಿವೀಕ್ಷಕನು ಅಗತ್ಯಪಡಿಸಿದ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು ಅಥವಾ ಯಾವುದೇ ಮಾಹಿತಿಯನ್ನು ನೀಡಲು ಯಾವ ವ್ಯಕ್ತಿಯನ್ನು ಅಗತ್ಯಪಡಿಸಲಾಗಿದೆಯೋ ಆ ಯಾರೇ ವ್ಯಕ್ತಿಯು ಭಾರತ ದಂಡ ಸಂಹಿತೆ, 1860 (1860ರ 45)ರ 175ನೇ ಮತ್ತು 176 ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಹಾಗೆ ಮಾಡಲು ಕಾನೂನುಸಮ್ಮತವಾಗಿ ಬದ್ಧನಾಗಿದ್ದಾನೆಂದು ಭಾವಿಸತಕ್ಕದ್ದು.

(4) ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳು, ಸದರಿ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟಿನ ಅಧಿಕಾರದ ಪ್ರಕಾರ ಮಾಡಿದ ಯಾವುದೇ ಶೋಧನೆಗೆ ಅಥವಾ ಜಪ್ತಿಗೆ ಅವು ಅನ್ವಯವಾಗುವ ರೀತಿಯಲ್ಲಿಯೇ (1)ನೇ ಉಪ-ಪ್ರಕರಣದ ಮೇರೆಗೆ ಮಾಡುವ ಶೋಧನಗಳಿಗೆ ಅಥವಾ ಜಪ್ತಿಗಳಿಗೆ ಸಹ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

## ಅಧ್ಯಾಯ – IX

### ವಿಶೇಷ ಉಪಬಂಧಗಳು

**44. ನಿಯೋಜಕರ ಜವಾಬ್ದಾರಿ.**- ನಿಯೋಜಕನು ಸುರಕ್ಷತೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳ ಪಾಲನೆಯನ್ನು ಸುನಿಶ್ಚಿತಪಡಿಸಿಕೊಳ್ಳುವ ಬಗ್ಗೆ ಮತ್ತು ಅಪಘಾತಗಳನ್ನು ತಡೆಯುವುದಕ್ಕೆ ಅವಶ್ಯವಿರುವ ಎಲ್ಲ ಕಾರ್ಯಸಾಧ್ಯವಾದ

ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ತನ್ನ ಕಾರ್ಯಸಂಸ್ಥೆಯಲ್ಲಿ ಯಾವುದೇ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಗಳನ್ನು ನಿರಂತರವಾಗಿ ಮತ್ತು ಸಮರ್ಪಕವಾಗಿ ಮೇಲ್ವಿಚಾರಣೆ ನಡೆಸುವುದಕ್ಕೆ ಜವಾಬ್ದಾರನಾಗಿರತಕ್ಕದ್ದು.

45. **ಮಜೂರಿಗಳನ್ನು ಮತ್ತು ನಷ್ಟ ಪರಿಹಾರವನ್ನು ಸಂದಾಯ ಮಾಡಲು ಜವಾಬ್ದಾರಿ.–** (1) ನಿಯೋಜಕನು, ತಾನು ನಿಯೋಜಿಸಿಕೊಂಡಿರುವ ಪ್ರತಿಯೊಬ್ಬ ಕಟ್ಟಡ ಕೆಲಸಗಾರನಿಗೆ ಮಜೂರಿಗಳನ್ನು ಸಂದಾಯ ಮಾಡಲು ಜವಾಬ್ದಾರನಾಗಿರತಕ್ಕದ್ದು ಮತ್ತು ಅಂಥ ಮಜೂರಿಗಳನ್ನು ನಿಯಮಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಸಂದಾಯ ಮಾಡತಕ್ಕದ್ದು.

(2) ಕಂಟ್ರಾಕ್ಟರನು, ತಾನು ನಿಯೋಜಿಸಿಕೊಂಡಿರುವ ಕಟ್ಟಡ ಕೆಲಸಗಾರನ ಸಂಬಂಧದಲ್ಲಿ ನಷ್ಟ ಪರಿಹಾರವನ್ನು ಸಂದಾಯ ಮಾಡಬೇಕಾದಾಗ ಅಂಥ ಸಂದಾಯವನ್ನು ಮಾಡಲು ಅವನು ಬದ್ಧನಾಗಿದ್ದು ಹಾಗೆ ಸಂದಾಯ ಮಾಡಲು ವಿಫಲನಾದ ಸಂದರ್ಭದಲ್ಲಿ ಅಥವಾ ಕಡಿಮೆ ಸಂದಾಯ ಮಾಡಿದಲ್ಲಿ, ಆಗ, ಕಟ್ಟಡ ಕೆಲಸಗಾರನು ಮರಣ ಹೊಂದಿದ ಅಥವಾ ಅವನು ಅಶಕ್ತನಾದ ಸಂದರ್ಭದಲ್ಲಿ, ನಿಯೋಜಕನು ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923 (1923ರ 8)ರ ಉಪಬಂಧಗಳ ಅನುಸಾರವಾಗಿ ಆ ನಷ್ಟ ಪರಿಹಾರವನ್ನು ಪೂರ್ಣವಾಗಿ ಅಥವಾ ಸಂದಾಯ ಮಾಡದೆ ಉಳಿದಿದ್ದ ಶಿಲ್ಕನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ಹಣವನ್ನು ಯಾವುದೇ ಕರಾರಿನ ಮೇರೆಗೆ ಕಂಟ್ರಾಕ್ಟರನಿಗೆ ಸಂದಾಯ ಮಾಡಬೇಕಾದ ಯಾವುದೇ ಮೊಬಲಗಿನಿಂದ ಕಟಾಯಿಸಿಕೊಳ್ಳುವ ಮೂಲಕವಾಗಲಿ ಅಥವಾ ಕಂಟ್ರಾಕ್ಟರನು ಸಂದಾಯ ಮಾಡಬೇಕಾದ ಸಾಲವೆಂಬಂತೆಯಾಗಲೀ ಕಂಟ್ರಾಕ್ಟರನಿಂದ ವಸೂಲು ಮಾಡತಕ್ಕದ್ದು.

46. **ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯ ಪ್ರಾರಂಭದ ಬಗ್ಗೆ ನೋಟೀಸು.–** (1) ನಿಯೋಜಕನು, ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭ ಮಾಡುವುದಕ್ಕೆ ಕನಿಷ್ಠ ಮೂವತ್ತು ದಿನಗಳ ಮುಂಚೆ, ಪ್ರಸ್ತಾವಿತ ಕಟ್ಟಡ ಅಥವಾ ಇತರ ನಿರ್ಮಾಣದ ಕಾಮಗಾರಿಯನ್ನು ಯಾವ ಪ್ರದೇಶದಲ್ಲಿ ಕಾರ್ಯಗತಗೊಳಿಸಬೇಕಾಗಿದೆಯೋ ಆ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಪರಿವೀಕ್ಷಕನಿಗೆ,–

(ಎ) ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯನ್ನು ಯಾವ ಸ್ಥಳದಲ್ಲಿ ನಡೆಸಲು ಉದ್ದೇಶಿಸಲಾಗಿದೆಯೋ ಆ ಸ್ಥಳದ ಹೆಸರನ್ನು ಮತ್ತು ಅದು ಇರುವ ಜಾಗದ ವಿವರವನ್ನು;

(ಬಿ) ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯನ್ನು ಯಾವ ವ್ಯಕ್ತಿಯು ಕೈಗೊಳ್ಳುತ್ತಾನೋ ಆ ವ್ಯಕ್ತಿಯ ಹೆಸರನ್ನು ಮತ್ತು ವಿಳಾಸದ ವಿವರವನ್ನು;

(ಸಿ) ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಪತ್ರಗಳನ್ನು ಯಾವ ವಿಳಾಸಕ್ಕೆ ಕಳುಹಿಸಬಹುದೋ ಆ ವಿಳಾಸಗಳ ವಿವರವನ್ನು;

(ಡಿ) ಕಾಮಗಾರಿಯಲ್ಲಿ ಒಳಗೊಂಡಿರುವ ಕೆಲಸದ ಸ್ವರೂಪವನ್ನು ಮತ್ತು ಯಾವುದೇ ಸ್ಥಾವರ ಮತ್ತು ಯಂತ್ರೋಪಕರಣವೂ ಸೇರಿದಂತೆ ಒದಗಿಸಿರುವ ಸೌಲಭ್ಯಗಳ ವಿವರವನ್ನು;

(ಇ) ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯಲ್ಲಿ ಬಳಸಲಾಗುವ ಸ್ಫೋಟಕಗಳು ಯಾವುದಾದರೂ ಇದ್ದರೆ ಅವುಗಳ ದಾಸ್ತಾನಿಗೆ ಮಾಡಿರುವ ಏರ್ಪಾಟುಗಳ ವಿವರಗಳನ್ನು;

(ಎಫ್) ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯ ವಿವಿಧ ಹಂತಗಳ ಅವಧಿಯಲ್ಲಿ ನಿಯೋಜಿಸಿಕೊಳ್ಳುವ ಸಂಭವವಿರುವ ಕೆಲಸಗಾರರ ಸಂಖ್ಯೆಯನ್ನು;

(ಜಿ) ಕಾಮಗಾರಿಯ ಸ್ಥಳದಲ್ಲಿ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯ ಒಟ್ಟಾರೆ ಉಸ್ತುವಾರಿ ಜವಾಬ್ದಾರಿಯನ್ನು ಯಾವ ವ್ಯಕ್ತಿಯು ವಹಿಸುವನೋ ಆ ವ್ಯಕ್ತಿಯ ಹೆಸರನ್ನು ಮತ್ತು ಹುದ್ದೆಯ ವಿವರವನ್ನು;

(ಹೆಚ್) ಕಾಮಗಾರಿಯ ಅಂದಾಜು ಅವಧಿಯನ್ನು;

(ಐ) ನಿಯಮಿಸಬಹುದಾದಂಥ ಇತರ ವಿಷಯಗಳನ್ನು

– ಒಳಗೊಂಡ ಒಂದು ಲಿಖಿತ ನೋಟೀಸನ್ನು ಕಳುಹಿಸತಕ್ಕದ್ದು ಅಥವಾ ಕಳುಹಿಸುವಂತೆ ಮಾಡತಕ್ಕದ್ದು.

(2) ಉಪ–ಪ್ರಕರಣ (1)ರ ಮೇರೆಗೆ ಒದಗಿಸಿದ ಯಾವುದೇ ವಿವರಗಳಲ್ಲಿ ಯಾವುದೇ ಬದಲಾವಣೆಯಾದಲ್ಲಿ, ನಿಯೋಜಕನು ಅಂಥ ಬದಲಾವಣೆಯಾದ ಎರಡು ದಿನಗಳೊಳಗಾಗಿ ಆ ಬದಲಾವಣೆಯನ್ನು ಪರಿವೀಕ್ಷಕನಿಗೆ ತಿಳಿಸತಕ್ಕದ್ದು.

(3) ಉಪ–ಪ್ರಕರಣ (1)ರಲ್ಲಿರುವುದು ಯಾವುದೂ ಸಮುಚಿತ ಸರ್ಕಾರವು ತುರ್ತು ಕಾಮಗಾರಿಯೆಂದು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯ ಅಂಥ ವರ್ಗದ ಸಂದರ್ಭದಲ್ಲಿ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ – X

## ದಂಡನೆಗಳು ಮತ್ತು ಕಾರ್ಯವಿಧಾನ

47. **ಸುರಕ್ಷಾ ಕ್ರಮಗಳಿಗೆ ಸಂಬಂಧಪಟ್ಟ ಉಪಬಂಧಗಳನ್ನು ಉಲ್ಲಂಘಿಸಿದ್ದಕ್ಕೆ ದಂಡನೆ.–** (1) 40ನೇ ಪ್ರಕರಣದ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು ಮತ್ತು ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ ಅಂಥ ಮೊದಲ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಅಂಥ ಉಲ್ಲಂಘನೆಯು ಯಾವ ಅವಧಿಯಲ್ಲಿ ಮುಂದುವರೆಯಿತೋ ಆ

ಅವಧಿಯಲ್ಲಿ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

(2) ಉಪ-ಪ್ರಕರಣ (1)ರ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧದ ಅಪರಾಧಿ ಎಂದು ನಿರ್ಣೀತನಾದ ಯಾರೇ ವ್ಯಕ್ತಿಯು, ಅದೇ ಉಪಬಂಧದ ಉಲ್ಲಂಘನೆಯನ್ನು ಅಥವಾ ಅದನ್ನು ಪಾಲಿಸಲು ವಿಫಲವಾಗಿರುವುದನ್ನು ಒಳಗೊಂಡ ಅಪರಾಧದ ಸಂಬಂಧದಲ್ಲಿ ಪುನಃ ತಪ್ಪಿತಸ್ಥನಾದರೆ, ಅವನು, ತರುವಾಯದ ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಆದರೆ ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು:

ಪರಂತು, ಈ ಪ್ರಕರಣದ ಉದ್ದೇಶಗಳಿಗಾಗಿ, ವ್ಯಕ್ತಿಯು ತರುವಾಯದಲ್ಲಿ ಅಪರಾಧ ನಿರ್ಣೀತನಾಗುತ್ತಿರುವಾಗ, ಆ ಅಪರಾಧವನ್ನು ಎಸಗುವುದಕ್ಕೆ ಎರಡು ವರ್ಷಗಳಿಗೂ ಮುಂಚೆ ಅಪರಾಧ ನಿರ್ಣೀತನಾಗಿರುವುದನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ:

ಮತ್ತೂ ಪರಂತು, ದಂಡನೆಯನ್ನು ವಿಧಿಸುವ ಪ್ರಾಧಿಕಾರವು, ಐದು ನೂರು ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸುವ ಕ್ರಮವನ್ನು ಸಮರ್ಥಿಸುವಂಥ ಅಸಾಧಾರಣ ಸಂದರ್ಭಗಳು ಇವೆಯೆಂದು ತನಗೆ ಮನವರಿಕೆಯಾದರೆ, ತನ್ನ ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ, ಐದು ನೂರು ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.

**48. ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಗಳ ಪ್ರಾರಂಭದ ಬಗ್ಗೆ ನೋಟೀಸು ಕೊಡಲು ವಿಫಲವಾದುದಕ್ಕೆ ದಂಡನೆ.–** ನಿಯೋಜಕನು 46ನೇ ಪ್ರಕರಣದ ಮೇರೆಗೆ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯ ಪ್ರಾರಂಭದ ಬಗ್ಗೆ ನೋಟೀಸನ್ನು ಕೊಡಲು ವಿಫಲನಾದಲ್ಲಿ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**49. ಅಡ್ಡಿಯುಂಟು ಮಾಡಿದ್ದಕ್ಕೆ ದಂಡನೆ.–** (1) ಈ ಅಧಿನಿಯಮದ ಮೇರೆಗೆ ಪರಿವೀಕ್ಷಕನು ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ಅವನಿಗೆ ಅಡ್ಡಿಯುಂಟು ಮಾಡುವ ಅಥವಾ ಕಾರ್ಯಸಂಸ್ಥೆಯ ಸಂಬಂಧದಲ್ಲಿ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಧಿಕೃತಗೊಳಿಸಿದ ಯಾವುದೇ ಪರಿವೀಕ್ಷಣೆಯನ್ನು, ಪರಿಶೀಲನೆಯನ್ನು, ವಿಚಾರಣೆಯನ್ನು ಅಥವಾ ತನಿಖೆಯನ್ನು ಮಾಡುವುದಕ್ಕಾಗಿ ಪರಿವೀಕ್ಷಕನಿಗೆ ಯಾವುದೇ ಯುಕ್ತ ಸೌಲಭ್ಯವನ್ನು ಒದಗಿಸಲು ನಿರಾಕರಿಸುವ ಅಥವಾ ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುವ ಯಾರೇ ವ್ಯಕ್ತಿಯು ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರೆಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

(2) ಈ ಅಧಿನಿಯಮಕ್ಕೆ ಅನುಸಾರವಾಗಿ ಇಟ್ಟಿರುವ ಯಾವುದೇ ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಪರಿವೀಕ್ಷಕನು ಕೇಳಿದಾಗ ಹಾಜರುಪಡಿಸಲು ಉದ್ದೇಶಪೂರ್ವಕವಾಗಿ ನಿರಾಕರಿಸುವ ಅಥವಾ ಈ ಅಧಿನಿಯಮದ ಮೇರೆಗೆ ತನ್ನ ಕರ್ತವ್ಯಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವ ಪರಿವೀಕ್ಷಕನ ಮುಂದೆ ಯಾರೇ ವ್ಯಕ್ತಿಯು ಹಾಜರಾಗುವುದನ್ನು ಅಥವಾ ಅವನಿಂದ ಪರೀಕ್ಷೆಗೊಳಪಡುವುದನ್ನು ತಡೆಯುವ ಅಥವಾ ತಡೆಯಲು ಪ್ರಯತ್ನಿಸುವ ಅಥವಾ ಆ ವ್ಯಕ್ತಿಯನ್ನು ತಡೆಯುವ ಸಂಭವವಿದೆಯೆಂದು ನಂಬಲು ಅವನಿಗೆ ಕಾರಣವಿರುವ ಯಾವುದೇ ಕಾರ್ಯವನ್ನು ಮಾಡುವ ಯಾರೇ ವ್ಯಕ್ತಿಯು ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**50. ಇತರ ಅಪರಾಧಗಳಿಗೆ ದಂಡನೆ.–** (1) ಈ ಅಧಿನಿಯಮದ ಯಾವುವೇ ಇತರ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳನ್ನು ಉಲ್ಲಂಘಿಸುವ ಅಥವಾ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳನ್ನು ಪಾಲಿಸಲು ವಿಫಲನಾಗುವ ಯಾರೇ ವ್ಯಕ್ತಿಯು, ಅಂಥ ಉಲ್ಲಂಘನೆಗೆ ಅಥವಾ ವಿಫಲತೆಗೆ ಬೇರೆ ಕಡೆ ಸ್ಪಷ್ಟ ದಂಡನೆಯ ಬಗ್ಗೆ ಉಪಬಂಧಿಸಿರದಿದ್ದರೆ ಅಂಥ ಪ್ರತಿಯೊಂದು ಉಲ್ಲಂಘನೆಗೆ ಅಥವಾ ಸಂದರ್ಭಾನುಸಾರ ವಿಫಲತೆಗೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅಂಥ ಉಲ್ಲಂಘನೆಯು ಅಥವಾ ಸಂದರ್ಭಾನುಸಾರ ವಿಫಲತೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ಮೊದಲನೆಯ ಉಲ್ಲಂಘನೆಗಾಗಿ ಅಥವಾ ವಿಫಲತೆಗಾಗಿ ಅಪರಾಧ ನಿರ್ಣಯವಾದ ನಂತರ ಅಂಥ ಉಲ್ಲಂಘನೆಯು ಅಥವಾ ವಿಫಲತೆಯು ಮುಂದುವರಿದ ಅವಧಿಯಲ್ಲಿ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

(2) ಉಪ-ಪ್ರಕರಣ (1)ರ ಮೇರೆಗಿನ ದಂಡನೆಯನ್ನು,–

(ಎ) ಉಲ್ಲಂಘನೆಯು ಅಥವಾ ವಿಫಲತೆಯು, ಯಾವ ವಿಷಯಕ್ಕೆ ಕೇಂದ್ರ ಸರ್ಕಾರವು ಸಮುಚಿತ ಸರ್ಕಾರವಾಗಿದೆಯೋ ಆ ವಿಷಯಕ್ಕೆ ಸಂಬಂಧಪಟ್ಟಿರುವಲ್ಲಿ, ಮಹಾನಿರ್ದೇಶಕನು; ಮತ್ತು

(ಬಿ) ಉಲ್ಲಂಘನೆಯು ಅಥವಾ ವಿಫಲತೆಯು, ಯಾವ ವಿಷಯಕ್ಕೆ ರಾಜ್ಯ ಸರ್ಕಾರವು ಸಮುಚಿತ ಸರ್ಕಾರವಾಗಿದೆಯೋ ಆ ವಿಷಯಕ್ಕೆ ಸಂಬಂಧಪಟ್ಟಿರುವಲ್ಲಿ, ಮುಖ್ಯ ಪರಿವೀಕ್ಷಕನು

–ವಿಧಿಸತಕ್ಕದ್ದು.

(3) ಸಂಬಂಧಪಟ್ಟ ವ್ಯಕ್ತಿಗೆ ಯಾವ ಕಾರಣಗಳ ಮೇಲೆ ದಂಡನೆಯನ್ನು ವಿಧಿಸಲು ಪ್ರಸ್ತಾವಿಸಲಾಗಿದೆಯೋ ಆ ಕಾರಣಗಳನ್ನು ಅವನಿಗೆ ತಿಳಿಸಿ; ಮತ್ತು

(ಬಿ) ನೋಟೀಸಿನಲ್ಲಿ ತಿಳಿಸಿರುವ ದಂಡನೆಯನ್ನು ವಿಧಿಸುವುದರ ವಿರುದ್ಧ ಆ ನೋಟೀಸ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸೂಕ್ತ ಕಾಲದೊಳಗಾಗಿ ಲಿಖಿತ ಮನವಿ ಸಲ್ಲಿಸಲು ಮತ್ತು ಆ ವಿಷಯದಲ್ಲಿ ತನ್ನ ಅಹವಾಲು ಹೇಳಿಕೊಳ್ಳಲು ಅವನು ಇಚ್ಛಿಸಿದರೆ ಹಾಗೆ ಮಾಡಲು ಅವನಿಗೆ ಯುಕ್ತ ಅವಕಾಶವನ್ನು ನೀಡಿ, ಲಿಖಿತ ನೋಟೀಸನ್ನು ನೀಡಿದ ಹೊರತು ಯಾವುದೇ ದಂಡನೆಯನ್ನು ವಿಧಿಸಕ್ಕದ್ದಲ್ಲ.

(4) ಈ ಅಧಿನಿಯಮದಲ್ಲಿ ಒಳಗೊಂಡಿರುವ ಯಾವುವೇ ಇತರ ಉಪಬಂಧಗಳಿಗೆ ಬಾಧಕವಾಗದಂತೆ, ಮಹಾನಿರ್ದೇಶಕನು ಮತ್ತು ಮುಖ್ಯ ಪರಿವೀಕ್ಷಕನು, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಯಾವುವೇ ಅಧಿಕಾರಗಳನ್ನು ಚಲಾಯಿಸುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ಮೇರೆಗೆ ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಸಾಕ್ಷಿದಾರರಿಗೆ ಹಾಜರಾಗುವಂತೆ ಸಮನ್ಸ್ ನೀಡುವುದು ಮತ್ತು ಸಾಕ್ಷಿದಾರರ ಹಾಜರಾತಿಯನ್ನು ಒತ್ತಾಯಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಪತ್ತೆ ಹಚ್ಚುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಅಥವಾ ಅದರ ನಕಲನ್ನು ಕಡ್ಡಾಯವಾಗಿ ಒದಗಿಸುವಂತೆ ಆದೇಶಿಸುವುದು;

(ಡಿ) ಅಫಿಡಾವಿಟ್‌ಗಳ ಮೇಲೆ ಸಾಕ್ಷ್ಯವನ್ನು ಪಡೆದುಕೊಳ್ಳುವುದು; ಮತ್ತು

(ಇ) ಸಾಕ್ಷಿಗಳ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಾರ್ಯಾಜ್ಞೆಗಳನ್ನು ಹೊರಡಿಸುವುದು.

(5) ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಈ ಅಧಿನಿಯಮದ ಅಥವಾ ಸಂದರ್ಭಾನುಸಾರ ಇತರ ಕಾನೂನಿನ ಮೂಲಕ ಶಿಕ್ಷಾರ್ಹವಾಗುವ ಯಾವುದೇ ಅಪರಾಧಕ್ಕಾಗಿ ಸಂಬಂಧಪಟ್ಟ ವ್ಯಕ್ತಿಯು ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಪ್ರಾಸಿಕ್ಯೂಷನ್‌ಗೆ ಒಳಗಾಗುವುದನ್ನು ಅಥವಾ ಈ ಅಧಿನಿಯಮದ ಅಥವಾ ಯಾವುದೇ ಅಂಥ ಕಾನೂನಿನ ಮೇರೆಗೆ ಅಥವಾ ಈ ಪ್ರಕರಣದ ಮೂಲಕ ಅಂಥ ಅಪರಾಧಕ್ಕಾಗಿ ಉಪಬಂಧಿಸಿರುವುದನ್ನು ಉಳಿದು ಇತರ ಯಾವುದೇ ಅಥವಾ ಹೆಚ್ಚಿನ ದಂಡನೆಗೆ ಅಥವಾ ಶಿಕ್ಷೆಗೆ ಗುರಿಯಾಗುವುದನ್ನು ತಡೆಯುತ್ತದೆಂದು ಅರ್ಥೈಸತಕ್ಕದ್ದಲ್ಲ:

ಪರಂತು, ಒಂದೇ ಅಪರಾಧಕ್ಕಾಗಿ ಒಬ್ಬ ವ್ಯಕ್ತಿಯನ್ನು ಎರಡು ಬಾರಿ ಶಿಕ್ಷಿಸತಕ್ಕದ್ದಲ್ಲ.

**51. ಅಪೀಲು.**–50ನೇ ಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ದಂಡನೆಯಿಂದ ಬಾಧಿತನಾದ ಯಾರೇ ವ್ಯಕ್ತಿಯು,–

(ಎ) ಮಹಾನಿರ್ದೇಶಕನು ದಂಡನೆಯನ್ನು ವಿಧಿಸಿದ್ದರೆ, ಕೇಂದ್ರ ಸರ್ಕಾರಕ್ಕೆ;

(ಬಿ) ಮುಖ್ಯ ಪರಿವೀಕ್ಷನು ದಂಡನೆಯನ್ನು ವಿಧಿಸಿದ್ದರೆ, ರಾಜ್ಯ ಸರ್ಕಾರಕ್ಕೆ

– ಅಂಥ ದಂಡನೆಯನ್ನು ವಿಧಿಸಿರುವುದನ್ನು ಅಂಥ ವ್ಯಕ್ತಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗಾಗಿ ಅಪೀಲನ್ನು ಸಲ್ಲಿಸಬಹುದು:

ಪರಂತು, ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು, ಮೇಲೆ ಹೇಳಿದ ಮೂರು ತಿಂಗಳೊಳಗಾಗಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣದಿಂದಾಗಿ ಅಪೀಲುದಾರನಿಗೆ ಸಾಧ್ಯವಾಗಲಿಲ್ಲವೆಂದು ತನಗೆ ಮನದಟ್ಟಾದರೆ, ಮತ್ತೂ ಮೂರು ತಿಂಗಳುಗಳ ಹೆಚ್ಚಿನ ಅವಧಿಯೊಳಗಾಗಿ ಅಂಥ ಅಪೀಲನ್ನು ಸಲ್ಲಿಸಲು ಅವಕಾಶ ನೀಡಬಹುದು.

(2) ಅಪೀಲು ಪ್ರಾಧಿಕಾರವು, ಅಪೀಲುದಾರನು ಅಹವಾಲನ್ನು ಹೇಳಿಕೊಳ್ಳಲು ಇಚ್ಛಿಸಿದರೆ, ಹಾಗೆ ಹೇಳಿಕೊಳ್ಳಲು ಅವನಿಗೆ ಸೂಕ್ತ ಅವಕಾಶವನ್ನು ಕೊಟ್ಟ ನಂತರ, ಮತ್ತು ಯಾವುದೇ ಹೆಚ್ಚಿನ ವಿಚಾರಣೆಯನ್ನು ಮಾಡಬೇಕಾಗಿದೆ ಎಂದು ಅದು ಪರಿಗಣಿಸಿದರೆ ಅಂಥ ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ, ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶವನ್ನು ಸ್ಥಿರೀಕರಿಸಿ, ಮಾರ್ಪಡಿಸಿ ಅಥವಾ ರದ್ದುಪಡಿಸಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಹೊರಡಿಸಬಹುದು ಅಥವಾ ಹೊಸ ತೀರ್ಮಾನಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂಥ ನಿರ್ದೇಶನಗಳೊಂದಿಗೆ ಪ್ರಕರಣವನ್ನು ಹಿಂದಕ್ಕೆ ಕಳುಹಿಸಬಹುದು.

**52. ದಂಡ ವಸೂಲಿ.**– 50ನೇ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯ ಮೇಲೆ ವಿಧಿಸಿದ ಯಾವುದೇ ದಂಡವನ್ನು ಅವನು ಸಂದಾಯ ಮಾಡದಿರುವಲ್ಲಿ,–

(i) ಮಹಾನಿರ್ದೇಶಕನು ಅಥವಾ ಸಂದರ್ಭಾನುಸಾರ ಮುಖ್ಯ ಪರಿವೀಕ್ಷಕನು ಹಾಗೆ ಸಂದಾಯ ಮಾಡಬೇಕಾದ ಮೊಬಲಗನ್ನು, ಆ ವ್ಯಕ್ತಿಗೆ ಕೊಡಬೇಕಾದ ಯಾವ ಹಣ ತನ್ನ ನಿಯಂತ್ರಣದಲ್ಲಿದೆಯೋ ಆ ಯಾವುದೇ ಹಣದಿಂದ ಕಟಾಯಿಸಿಕೊಳ್ಳಬಹುದು; ಅಥವಾ

(ii) ಮಹಾನಿರ್ದೇಶಕನು ಅಥವಾ ಸಂದರ್ಭಾನುಸಾರ ಮುಖ್ಯ ಪರಿವೀಕ್ಷಕನು, ಹಾಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಆ ವ್ಯಕ್ತಿಗೆ ಸೇರಿದ ಯಾವ ಸರಕುಗಳು ತನ್ನ ನಿಯಂತ್ರಣದಲ್ಲಿವೆಯೋ ಆ ಸರಕುಗಳನ್ನು ತಡೆಹಿಡಿದಿಟ್ಟುಕೊಂಡು ಅಥವಾ ಮಾರಾಟ ಮಾಡಿ ವಸೂಲಿ ಮಾಡಬಹುದು; ಅಥವಾ

(iii) ಖಂಡ (i) ರಲ್ಲಿ ಅಥವಾ ಖಂಡ (ii) ರಲ್ಲಿ ಉಪಬಂಧಿಸಿದ ರೀತಿಯಲ್ಲಿ ಅಂಥ ವ್ಯಕ್ತಿಯಿಂದ ಮೊಬಲಗನ್ನು ವಸೂಲು ಮಾಡಲಾಗಿದ್ದರೆ, ಮಹಾನಿರ್ದೇಶಕನು ಅಥವಾ ಸಂದರ್ಭಾನುಸಾರ, ಮುಖ್ಯ ಪರಿವೀಕ್ಷಕನು ಅಂಥ ವ್ಯಕ್ತಿಯಿಂದ ಬಾಕಿ ಬರಬೇಕಾದ ಮೊಬಲಗನ್ನು ನಿರ್ದಿಷ್ಟಪಡಿಸಿ ಪ್ರಮಾಣ ಪತ್ರವನ್ನು ಸಿದ್ಧಪಡಿಸಿ ಅದಕ್ಕೆ ತನ್ನ ಸಹಿಯನ್ನು ಮಾಡತಕ್ಕದ್ದು ಮತ್ತು ಅದನ್ನು ಅಂಥ ವ್ಯಕ್ತಿಯು ಯಾವ ಜಿಲ್ಲೆಯಲ್ಲಿ ಸ್ವತ್ತನ್ನು ಹೊಂದಿರುವನೋ ಅಥವಾ ವಾಸಿಸುತ್ತಿರುವನೋ ಅಥವಾ ತನ್ನ ವ್ಯವಹಾರ

ನಡೆಸುತ್ತಿರುವನೋ ಆ ಜಿಲ್ಲೆಯ ಕಲೆಕ್ಟರನಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವನ್ನು ಸ್ವೀಕರಿಸಿದ ಮೇಲೆ ಆ ಕಲೆಕ್ಟರನು ಆ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ಅಂಥ ವ್ಯಕ್ತಿಯಿಂದ, ಅದು ಭೂಕಂದಾಯ ಬಾಕಿಯಾಗಿದ್ದರೆ ಹೇಗೋ ಹಾಗೆ ವಸೂಲಿ ಮಾಡತಕ್ಕದ್ದು.

53. **ಕಂಪನಿಗಳಿಂದ ಅಪರಾಧಗಳು.**– (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವನ್ನು ಮಾಡಿದ ಸಮಯದಲ್ಲಿ ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕೆ ಕಂಪನಿಗೆ ಜವಾಬ್ದಾರನಾಗಿದ್ದ, ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಸಹ ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪ–ಪ್ರಕರಣದಲ್ಲಿ ಇರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಯುಕ್ತ ಎಚ್ಚರಿಕೆ ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪ–ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು.

**ವಿವರಣೆ**:– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

54. **ಅಪರಾಧಗಳ ಸಂಜ್ಞಾನ.**– (1) ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾದವನ್ನು,–

(ಎ) ಮಹಾನಿರ್ದೇಶಕನು ಅಥವಾ ಮುಖ್ಯ ಪರಿವೀಕ್ಷಕನು ಸಲ್ಲಿಸಿದ ಅಥವಾ ಅವರಿಂದ ಲಿಖಿತದಲ್ಲಿ ಮೊದಲೇ ಮಂಜೂರಾತಿ ಪಡೆದು ಸಲ್ಲಿಸಿದ; ಅಥವಾ

(ಬಿ) ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21)ರ ಮೇರೆಗೆ ನೋಂದಾಯಿತವಾದ ಸ್ವಯಂಸೇವಾ ಸಂಸ್ಥೆಯ ಪದಾಧಿಕಾರಿಯು ಸಲ್ಲಿಸಿದ; ಅಥವಾ

(ಸಿ) ಕಾರ್ಮಿಕ ಸಂಘಗಳ ಅಧಿನಿಯಮ, 1926 (1926ರ 16)ರ ಮೇರೆಗೆ ನೋಂದಾಯಿತವಾದ ಯಾವುದೇ ಸಂಬಂಧಪಟ್ಟ ಕಾರ್ಮಿಕ ಸಂಘದ ಪದಾಧಿಕಾರಿಯು ಸಲ್ಲಿಸಿದ

– ದೂರಿನ ಮೇಲೆ ಹೊರತು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಅಥವಾ ಮೊದಲನೇ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ.

55. **ಪ್ರಾಸಿಕ್ಯೂಷನ್‌ಗಳ ಕಾಲಪರಿಮಿತಿ.**– ಎಸಗಲಾಗಿದೆಯೆಂದು ಆರೋಪಿಸಿರುವ ಅಪರಾಧವು ಯಾವ ದಿನಾಂಕದಂದು ಮಹಾನಿರ್ದೇಶಕರ, ಮುಖ್ಯ ಪರಿವೀಕ್ಷಕನ, ಸ್ವಯಂ ಸೇವಾ ಸಂಸ್ಥೆಯ ಪದಾಧಿಕಾರಿಯ ಅಥವಾ ಸಂಧರ್ಭಾನುಸಾರ ಯಾವುದೇ ಸಂಬಂಧಪಟ್ಟ ಕಾರ್ಮಿಕ ಸಂಘದ ಪದಾಧಿಕಾರಿಯ ಗಮನಕ್ಕೆ ಬಂದಿತ್ತೋ ಆ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಆ ಬಗ್ಗೆ ದೂರು ಸಲ್ಲಿಸಿದ ಹೊರತು ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

## ಅಧ್ಯಾಯ – XI

### ಸಂಕೀರ್ಣ

56. **ಅಧಿಕಾರಗಳನ್ನು ವಹಿಸಿಕೊಡುವುದು.**– ಮಂಡಲಿಯು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳು ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು, ಮಂಡಲಿಯ ಅಧ್ಯಕ್ಷನಿಗೆ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಕಾರ್ಯದರ್ಶಿಗೆ ಅಥವಾ ಯಾರೇ ಇತರ ಅಧಿಕಾರಿಗೆ ಅಥವಾ ನೌಕರನಿಗೆ, ಈ ಅಧಿನಿಯಮದ ಮೇರೆಗಿನ ಯಾವ ಯಾವ ಅಧಿಕಾರಗಳನ್ನು ವಹಿಸಿಕೊಡುವುದು ಅಗತ್ಯವೆಂದು ತಾನು ಭಾವಿಸಬಹುದೋ ಅಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅವರಿಗೆ ವಹಿಸಿಕೊಡಬಹುದು.

**57. ವಿವರ ಪಟ್ಟಿಕೆಗಳು.–** ಪ್ರತಿಯೊಂದು ಮಂಡಲಿಯು, ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಆ ಸರ್ಕಾರಗಳು ಅಗತ್ಯಪಡಿಸಬಹುದಾದಂಥ ವಿವರಪಟ್ಟಿಕೆಗಳನ್ನು ಕಾಲಕಾಲಕ್ಕೆ ಒಪ್ಪಿಸತಕ್ಕದ್ದು.

**58. ಕಟ್ಟಡ ಕೆಲಸಗಾರರಿಗೆ ಅಧಿನಿಯಮ 1923ರ 8ರ ಅನ್ವಯ.–** ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923ರ ಉಪಬಂಧಗಳು ಈ ಅಧಿನಿಯಮವು ಯಾವ ನಿಯೋಜನೆಗೆ ಅನ್ವಯವಾಗುವುದೋ ಆ ನಿಯೋಜನೆಯನ್ನು, ಆ ಅಧಿನಿಯಮದ ಎರಡನೆಯ ಅನುಸೂಚಿಯಲ್ಲಿ ಸೇರಿಸಿದ್ದಿದ್ದರೆ ಕಟ್ಟಡ ಕೆಲಸಗಾರರಿಗೆ ಹೇಗೆ ಅನ್ವವಾಗುತ್ತಿದ್ದವೋ ಹಾಗೆಯೇ ಅನ್ವಯವಾಗತಕ್ಕದ್ದು.

**59. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಮಾಡಿದ ಆದೇಶದ ಅನುಸಾರ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು ಪ್ರಾಸಿಕ್ಯೂಷನ್‌ನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಮಾಡಿದ ಅಥವಾ ನೀಡಿದ ಯಾವುದೇ ಆದೇಶದ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗಬಹುದಾದ ಯಾವುದೇ ಹಾನಿಗಾಗಿ ಸರ್ಕಾರದ, ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ಮಂಡಲಿಯ ಅಥವಾ ಸಮಿತಿಗಳ ಅಥವಾ ಅಂಥ ಮಂಡಲಿಯ ಯಾರೇ ಸದಸ್ಯನ ಅಥವಾ ಸರ್ಕಾರದ ಅಥವಾ ಮಂಡಲಿಯ ಯಾರೇ ಅಧಿಕಾರಿಯ ಅಥವಾ ನೌಕರನ ಅಥವಾ ಸರ್ಕಾರದಿಂದ ಅಥವಾ ಯಾವುದೇ ಮಂಡಲಿಯಿಂದ ಅಥವಾ ಸಮಿತಿಯಿಂದ ಅಧಿಕಾರ ಪಡೆದ ಯಾರೇ ಇತರೆ ವ್ಯಕ್ತಿಯ ವಿರುದ್ಧ ಯಾವುದೇ ಪ್ರಾಸಿಕ್ಯೂಷನ್‌ನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**60. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಯಾವುದೇ ರಾಜ್ಯದಲ್ಲಿ ಜಾರಿಗೆ ತರುವುದಕ್ಕಾಗಿ ಆ ರಾಜ್ಯದ ಸರ್ಕಾರಕ್ಕೆ ಅಥವಾ ಮಂಡಲಿಗೆ ನಿರ್ದೇಶನಗಳನ್ನು ನೀಡಬಹುದು.

**61. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ಕಂಡು ಬರಬಹುದಾದಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ಕಲ್ಪಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**62. ನಿಯಮಗಳನ್ನು ರಚಿಸಲು ಅಧಿಕಾರ.–** (1) ಸಮುಚಿತ ಸರ್ಕಾರವು, ತಜ್ಞ ಸಮಿತಿಯೊಂದಿಗೆ ಸಮಾಲೋಚನೆ ನಡೆಸಿದ ತರುವಾಯ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಅಂಥ ನಿಯಮಗಳು ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಕೇಂದ್ರ ಸಲಹಾ ಸಮಿತಿಯಲ್ಲಿ ಮತ್ತು ರಾಜ್ಯ ಸಲಹಾ ಸಮಿತಿಯಲ್ಲಿ ವಿವಿಧ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಸದಸ್ಯರಾಗಿ ನೇಮಕ ಮಾಡಬೇಕಾದ ವ್ಯಕ್ತಿಗಳ ಸಂಖ್ಯೆ, ಅವರ ಪದಾವಧಿ ಮತ್ತು ಸೇವೆಯ ಇತರ ಷರತ್ತುಗಳು, ಅವರ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು 3ನೇ ಪ್ರಕರಣದ (3)ನೇ ಉಪ–ಪ್ರಕರಣದ ಅಥವಾ ಸಂದರ್ಭಾನುಸಾರ, 4ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಖಾಲಿಸ್ಥಾನಗಳನ್ನು ಭರ್ತಿ ಮಾಡುವ ರೀತಿ;

(ಬಿ) 5ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ತಜ್ಞ ಸಮಿತಿಯ ಸಭೆಗಳಿಗೆ ಹಾಜರಾಗಿದ್ದಕ್ಕಾಗಿ ಸದಸ್ಯರಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ಭತ್ಯೆಗಳು;

(ಸಿ) 7ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಕಾರ್ಯಸಂಸ್ಥೆಯ ನೋಂದಣಿಗಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ನೋಂದಣಿಗಾಗಿ ಫೀಜನ್ನು ವಿಧಿಸುವುದು ಮತ್ತು ಆ ಅರ್ಜಿಯ ನಮೂನೆಯಲ್ಲಿ ಒಳಗೊಂಡಿರಬೇಕಾದ ವಿವರಗಳು;

(ಡಿ) 7ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗಿನ ನೋಂದಣಿ ಪ್ರಮಾಣ ಪತ್ರದ ನಮೂನೆ, ಅಂಥ ಪ್ರಮಾಣ ಪತ್ರವನ್ನು ಯಾವ ಕಾಲದೊಳಗೆ ನೀಡಬಹುದೋ ಆ ಕಾಲ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ನೀಡಬಹುದೋ ಆ ಷರತ್ತುಗಳು;

(ಇ) ಮಾಲೀಕತ್ವದಲ್ಲಿ ಅಥವಾ ಆಡಳಿತದಲ್ಲಿ ಅಥವಾ ಇತರ ವಿವರಗಳಲ್ಲಿ ಆಗಿರುವ ಬದಲಾವಣೆಯನ್ನು 7ನೇ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ ನೋಂದಣಿ ಅಧಿಕಾರಿಗೆ ಯಾವ ನಮೂನೆಯಲ್ಲಿ ತಿಳಿಸಬೇಕೋ ಆ ನಮೂನೆ;

(ಎಫ್) 12ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಫಲಾನುಭವಿಯಾಗಿ ನೋಂದಾಯಿಸಿಕೊಳ್ಳಲು ಅರ್ಜಿಯನ್ನು ಯಾವ ನಮೂನೆಯಲ್ಲಿ ಸಲ್ಲಿಸಬೇಕೋ ಆ ನಮೂನೆ;

(ಜಿ) 12ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯ ಜೊತೆಗೆ ಯಾವ ದಸ್ತಾವೇಜನ್ನು ಸಲ್ಲಿಸಬೇಕೋ ಮತ್ತು ಎಷ್ಟು ಫೀಜನ್ನು ಇರಿಸಬೇಕೋ ಆ ದಸ್ತಾವೇಜು ಮತ್ತು ಅಷ್ಟು ಫೀಜು;

(ಹೆಚ್) ಮಂಡಲಿಯ ಕಾರ್ಯದರ್ಶಿಯು 12ನೇ ಪ್ರಕರಣದ (6)ನೇ ಉಪ-ಪ್ರಕರಣದ ಮೇರೆಗೆ ಯಾವ ರಿಜಿಸ್ಟರ್‌ಗಳನ್ನು ಇರಿಸಬೇಕೋ ಆ ರಿಜಿಸ್ಟರುಗಳು;

(ಐ) 14ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಯಾವ ಸೌಲಭ್ಯಗಳನ್ನು ನೀಡಬಹುದೋ ಆ ಸೌಲಭ್ಯಗಳು;

(ಜೆ) 15ನೇ ಪ್ರಕರಣದ ಮೇರೆಗೆ ಫಲಾನುಭವಿಗಳ ರಿಜಿಸ್ಟರನ್ನು ಯಾವ ನಮೂನೆಯಲ್ಲಿ ನಿರ್ವಹಿಸಬೇಕೋ ಆ ನಮೂನೆ;

(ಕೆ) 18ನೇ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ಮಂಡಳಿಯ ಅಧ್ಯಕ್ಷನ ಮತ್ತು ಸದಸ್ಯರ ನೇಮಕದ ನಿಬಂಧನೆಗಳು ಮತ್ತು ಷರತ್ತುಗಳು, ಅವರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಇತರ ಭತ್ಯೆಗಳು ಮತ್ತು ಅವರ ಸ್ಥಾನಗಳಲ್ಲಿ ಸಾಂದರ್ಭಿಕವಾಗಿ ಉಂಟಾಗುವ ಖಾಲಿಸ್ಥಾನಗಳನ್ನು ಭರ್ತಿ ಮಾಡುವ ರೀತಿ;

(ಎಲ್) 19ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಮಂಡಳಿಯ ಕಾರ್ಯದರ್ಶಿಯ ಮತ್ತು ಇತರ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅವರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು;

(ಎಂ) ಕಾರ್ಯಕಲಾಪಗಳನ್ನು ನಡೆಸಲು ಅವಶ್ಯವಿರುವ ಕೋರಂ ಸೇರಿದಂತೆ 20ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮಂಡಳಿಯು ಸಭೆ ಸೇರಬೇಕಾದ ವೇಳೆ ಮತ್ತು ಸ್ಥಳ ಮತ್ತು ಅಂಥ ಸಭೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ ನಿಯಮಗಳು;

(ಎನ್) 22ನೇ ಪ್ರಕರಣದ (1)ನೇ ಉಪ-ಪ್ರಕರಣದ (ಸಿ) ಖಂಡದ ಮೇರೆಗೆ ಗೃಹ ನಿರ್ಮಾಣ ಸಾಲಗಳಾಗಿ ಮತ್ತು ಮುಂಗಡಗಳಾಗಿ ಸಂದಾಯ ಮಾಡಬಹುದಾದ ಮೊಬಲಗು, ಅಂಥ ಸಂದಾಯದ ನಿಬಂಧನೆಗಳು ಮತ್ತು ಷರತ್ತುಗಳು (ಇ) ಖಂಡದ ಮೇರೆಗಿನ ವಿದ್ಯಾಭಾಸಕ್ಕೆ ನೆರವು, (ಎಫ್) ಖಂಡದ ಮೇರೆಗೆ ಸಂದಾಯ ಮಾಡಬಹುದಾದ ವೈದ್ಯಕೀಯ ವೆಚ್ಚಗಳು ಮತ್ತು ಫಲಾನುಭವಿಗಳಿಗೆ ಯಾರು ಅವಲಂಬಿತರಾಗಿದ್ದಾರೋ ಆ ವ್ಯಕ್ತಿಗಳು ಮತ್ತು (ಹೆಚ್) ಖಂಡದ ಮೇರೆಗೆ ಇತರ ಯಾವ ಕ್ಷೇಮಾಭಿವೃದ್ಧಿ ಕ್ರಮಗಳಿಗೆ ಉಪಬಂಧ ಕಲ್ಪಿಸಬಹುದೋ ಆ ಇತರ ಕ್ಷೇಮಾಭಿವೃದ್ಧಿ ಕ್ರಮಗಳು;

(ಓ) 22ನೇ ಪ್ರಕರಣದ (3)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ಸ್ಥಳೀಯ ಪ್ರಾಧಿಕಾರಗಳಿಗೆ ಮತ್ತು ನಿಯೋಜಕರಿಗೆ ಸಂದಾಯ ಮಾಡಬೇಕಾದ ಸಹಾಯಾನುದಾನಗಳ ಮಿತಿಗಳು;

(ಪಿ) 25ನೇ ಪ್ರಕರಣದ ಮೇರೆಗೆ ಮಂಡಳಿಯ ಬಜೆಟ್‌ನ್ನು ಯಾವ ನಮೂನೆಯಲ್ಲಿ ಮತ್ತು ಕಾಲದೊಳಗೆ ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಬೇಕೋ ಆ ನಮೂನೆ ಮತ್ತು ಕಾಲ;

(ಕ್ಯೂ) 26ನೇ ಪ್ರಕರಣದ ಮೇರೆಗೆ ಮಂಡಳಿಯ ವಾರ್ಷಿಕ ವರದಿಯನ್ನು ಯಾವ ನಮೂನೆಯಲ್ಲಿ ಮತ್ತು ಕಾಲದೊಳಗೆ ರಾಜ್ಯ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕೋ ಆ ನಮೂನೆ ಮತ್ತು ಕಾಲ;

(ಆರ್) 27ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಲೆಕ್ಕಪತ್ರಗಳ ವಾರ್ಷಿಕ ವಿವರಣ ಪಟ್ಟಿಯ ನಮೂನೆ ಮತ್ತು (4)ನೇ ಉಪ-ಪ್ರಕರಣದ ಮೇರೆಗೆ ಒದಗಿಸಬೇಕಾದ ಲೆಕ್ಕ ಪರಿಶೋಧಕರ ವರದಿಯೊಂದಿಗೆ ಲೆಕ್ಕಪತ್ರಗಳ ಪರಿಶೋಧಿತ ಪ್ರತಿಯನ್ನು ಯಾವ ದಿನಾಂಕಕ್ಕೆ ಮುಂಚೆ ಸಲ್ಲಿಸಬೇಕೋ ಆ ದಿನಾಂಕ;

(ಎಸ್) 28ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಉಪಬಂಧ ಕಲ್ಪಿಸಬೇಕಾದ ವಿಷಯಗಳು ಮತ್ತು ಆ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಕಟ್ಟಡ ಕೆಲಸಗಾರರಿಗೆ ಆ ಉಪ-ಪ್ರಕರಣದ ಉಪಬಂಧಗಳು ಎಷ್ಟರಮಟ್ಟಿಗೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಅನ್ವಯವಾಗತಕ್ಕದ್ದೋ ಆ ವ್ಯಾಪ್ತಿ ಮತ್ತು ಷರತ್ತುಗಳು;

(ಟಿ) 30ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನಿಯೋಜಕರು ನಿರ್ವಹಿಸಬೇಕಾದ ರಿಜಿಸ್ಟರುಗಳು ಮತ್ತು ದಾಖಲೆಗಳು ಮತ್ತು ಅಂಥ ರಿಜಿಸ್ಟರುಗಳನ್ನು ಮತ್ತು ದಾಖಲೆಗಳನ್ನು ಯಾವ ನಮೂನೆಯಲ್ಲಿ ನಿರ್ವಹಿಸಬೇಕೋ ಆ ನಮೂನೆ ಮತ್ತು ಅವುಗಳಲ್ಲಿ ಸೇರಿಸಬೇಕಾದ ವಿವರಗಳು;

(ಯು) 30ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ನೋಟೀಸನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಪ್ರದರ್ಶಿಸಬೇಕೋ ಆ ನಮೂನೆ ಮತ್ತು ರೀತಿ ಮತ್ತು ಅದು ಒಳಗೊಂಡಿರಬೇಕಾದ ವಿವರಗಳು;

(ವಿ) 30ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಕಟ್ಟಡ ಕಾರ್ಮಿಕರಿಗೆ ಮಜೂರಿ ಪುಸ್ತಕಗಳು ಅಥವಾ ಮಜೂರಿ ಚೀಟಿಗಳನ್ನು ನೀಡುವುದು ಮತ್ತು ಮಜೂರಿ ಪುಸ್ತಕಗಳಲ್ಲಿ ಮಜೂರಿ ಚೀಟಿಗಳಲ್ಲಿ ನಮೂದುಗಳನ್ನು ಯಾವ ರೀತಿಯಲ್ಲಿ ಮಾಡಬೇಕೋ ಮತ್ತು ಅಧಿಪ್ರಮಾಣಕರಿಸಬೇಕೋ ಆ ರೀತಿ;

(ಡಬ್ಲ್ಯು) 33ನೇ ಪ್ರ ಕರಣದ ಮೇರೆಗೆ ಒದಗಿಸಬೇಕಾದ ಶೌಚಾಲಯಗಳು ಮತ್ತು ಮೂತ್ರಾಲಯಗಳ ಬಗೆಗಳು;

(ಎಕ್ಸ್) 36ನೇ ಪ್ರಕರಣದ ಮೇರೆಗೆ ಯಾವ ಪ್ರಥಮ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಬೇಕೋ ಆ ಪ್ರಥಮ ಚಿಕಿತ್ಸಾ ಸೌಲಭ್ಯಗಳು;

(ವೈ) 37ನೇ ಪ್ರಕರಣದ (ಎ) ಖಂಡದ ಮೇರೆಗೆ ಎಂಥ ಕ್ಯಾಂಟಿನ್ ಸೌಲಭ್ಯಗಳನ್ನು ಒದಗಿಸಬೇಕೋ ಅಂಥ ಕ್ಯಾಂಟಿನ್ ಸೌಲಭ್ಯಗಳು;

(ಜಡ್) 37ನೇ ಪ್ರಕರಣದ (ಬಿ) ಖಂಡದ ಮೇರೆಗೆ ಯಾವ ಕ್ಷೇಮಾಭಿವೃದ್ಧಿ ಕ್ರಮಗಳಿಗೆ ಉಪಬಂಧ ಕಲ್ಪಿಸಬೇಕೋ ಆ ಕ್ರಮಗಳು;

(ಜಡ್ಎ) 38ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೆರೆಗೆ ನಿಯೋಜಕರ ಮತ್ತು ಕಟ್ಟಡ ಕೆಲಸಗಾರರ ಪ್ರತಿನಿಧಿಗಳ ಸಂಖ್ಯೆ ಮತ್ತು ಆ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಸುರಕ್ಷಾ ಅಧಿಕಾರಿಗಳ ಅರ್ಹತೆಗಳು ಮತ್ತು ಅವರು ನಿರ್ವಹಿಸಬೇಕಾಗಿರುವ ಕರ್ತವ್ಯಗಳು;

(ಜಡ್ಬಿ) 39ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೀಡಬೇಕಾದ ಅಪಘಾತದ ನೋಟೀಸಿನ ನಮೂನೆ, ಈ ಬಗ್ಗೆ ಉಪಬಂಧ ಕಲ್ಪಿಸಬೇಕಾದ ಇತರ ವಿಷಯಗಳು ಮತ್ತು ಅಂಥ ನೋಟೀಸನ್ನು ಯಾವ ಕಾಲದೊಳಗೆ ನೀಡಬೇಕೋ ಆ ಕಾಲ;

(ಜಡ್ಸಿ) 40ನೇ ಪ್ರಕರಣದ ಮೇರೆಗೆ ಕಟ್ಟಡ ಕೆಲಸಗಾರರ ಸುರಕ್ಷೆಗಾಗಿ ಮತ್ತು ಆರೋಗ್ಯಕ್ಕಾಗಿ ರಚಿಸಬೇಕಾದ ನಿಯಮಗಳು;

(ಜಡ್ಡಿ) 43ನೇ ಪ್ರಕರಣದ (1)ನೇ ಉಪ-ಪ್ರಕರಣದ (ಇ) ಖಂಡದ ಮೇರೆಗೆ ಪರಿವೀಕ್ಷಕನು ಚಲಾಯಿಸಬಹುದಾದ ಅಧಿಕಾರಗಳು ಮತ್ತು ಆ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ನಿಯೋಜನೆಗೊಂಡ ತಜ್ಞರು ಅಥವಾ ಏಜೆನ್ಸಿಗಳು ಯಾವ ಅರ್ಹತೆಗಳನ್ನು ಮತ್ತು ಅನುಭವವನ್ನು ಹೊಂದಿರಬೇಕೋ ಆ ಅರ್ಹತೆಗಳು ಮತ್ತು ಅನುಭವ ಮತ್ತು ಅಂಥ ತಜ್ಞರನ್ನು ಅಥವಾ ಏಜೆನ್ಸಿಗಳನ್ನು ಯಾವ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ನಿಯೋಜಿಸಿಕೊಳ್ಳಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು;

(ಜಡ್ಇ) 45ನೇ ಪ್ರಕರಣದ ಮೇರೆಗೆ ಕಟ್ಟಡ ಕೆಲಸಗಾರರಿಗೆ ಮಜೂರಿಗಳನ್ನು ಯಾವ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮುಂಚೆ ಸಂದಾಯ ಮಾಡಬೇಕೋ ಆ ದಿನಾಂಕ;

(ಜಡ್ಎಫ್) 46ನೇ ಪ್ರಕರಣದ (1)ನೇ ಉಪ-ಪ್ರಕರಣದ (i)ನೇ ಖಂಡದ ಮೇರೆಗೆ ಯಾವ ವಿಷಯಗಳನ್ನು ನಿಯಮಿಸಬೇಕಾಗಿದೆಯೋ ಆ ವಿಷಯಗಳು;

(ಜಡ್ಜಿ) ಯಾವ ಇತರ ವಿಷಯಗಳನ್ನು ನಿಯಮಿಸಬೇಕೋ ಅಥವಾ ನಿಯಮಿಸಬಹುದೋ ಆ ಯಾವುದೇ ಇತರ ವಿಷಯ.

(3) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದಲ್ಲಿ ಎರಡು ಸದನಗಳು ಇದ್ದರೆ ಪ್ರತಿಯೊಂದು ಸದನದ ಮುಂದೆ ಅಥವಾ ವಿಧಾನಮಂಡಲದಲ್ಲಿ ಒಂದೇ ಸದನ ಇದ್ದರೆ ಆ ಸದನದ ಮುಂದೆ ಮಂಡಿಸತಕ್ಕದ್ದು.

**63. ಕೆಲವು ಕಾನೂನುಗಳನ್ನು ಉಳಿಸುವುದು.–** ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಯಾವುದೂ, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರಿಗೆ ಒದಗಿಸಿರುವವುಗಳಿಗಿಂತಲೂ ಹೆಚ್ಚು ಪ್ರಯೋಜನಕರವಾದ ಕ್ಷೇಮಾಭಿವೃದ್ಧಿ ಯೋಜನೆಗಳಿಗೆ ಉಪಬಂಧಕಲ್ಪಿಸುವ ರಾಜ್ಯದಲ್ಲಿನ ಯಾವುದೇ ಸಂವಾದಿ ಕಾನೂನಿನ ಪ್ರವರ್ತನೆಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**64. ನಿರಸನ ಮತ್ತು ಉಳಿಸುವಿಕೆ.–** (1) ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ನಿಯೋಜನಾ ವಿನಿಯಮ ಮತ್ತು ಸೇವಾ ಷರತ್ತುಗಳು) ಮೂರನೆಯ ಅಧ್ಯಾದೇಶ, 1996 (1996ರ 25) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

* * * * *